(ಅನುಬಂಧ – VII)

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

(ಇ) ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ, 2006. ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, "2006ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿಯನ್ನು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ '2006ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿಯನ್ನು ನೀಡಲಾಯಿತು)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, '2006ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು' ಸಭೆಯ ಮುಂದೆ ಮಂಡಿಸುತ್ತೇನೆ.

(ಅನುಬಂಧ – VIII)

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. ಈಗ ಸಭೆಯನ್ನು 2 ಗಂಟೆ 15 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

(ಸಭೆಯು 1 ಗಂಟೆ 15 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 2 ಗಂಟೆ 15 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(ಸಭೆಯು ಪುನಃ 2 ಗಂಟೆ 50 ನಿಮಿಷಕ್ಕೆ ಗಂಟೆಗೆ ಸಮಾವೇಶಗೊಂಡಿತು. ಸನ್ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣ) ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

3. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಪ್ರಿವಿಲೆಜ್ ಮೋಶನ್ ಮೂವ್ ಮಾಡಲು ಅನುಮತಿ ಕೊಡುವ ಬಗ್ಗೆ ಮತ್ತು ಚರ್ಚೆ ಇಲ್ಲದೆ ವಿಧೇಯಕಕ್ಕೆ ಅಂಗೀಕಾರ ನೀಡಿದ್ದರ ಬಗ್ಗೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ಒಂದು privilege motion ಅನ್ನು ಮೂವ್ ಮಾಡಿದ್ದೆ. ಅದಕ್ಕೂ ತಾವು ಅವಕಾಶವನ್ನು ಕೊಡಲಿಲ್ಲ.

ಅಧ್ಯಕ್ಷರು : ಆಯಿತು.ಪ್ರಶ್ನೋತ್ತರವಾದ ಮೇಲೆ ತೆಗೆದುಕೊಳ್ಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಸನ್ಮಾನ್ಯ ಅಧ್ಯಕ್ಷರೇ, privilege motion ಪ್ರಶ್ನೋತ್ತರವಾದ ಮೇಲೆ ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. **XX**

ಅಧ್ಯಕ್ಷರು : ಈಗ ನಾನು ಹೇಳುವುದು ಅವರಿಗೆ ಸರ್ವೀಸ್ ಆಗಿದೆ. ಅವರು ಏನು ಹೇಳುತ್ತಾರೋ ಹೇಳಲಿ. ಅವರಿಗೂ ಒಂದು ಅವಕಾಶವನ್ನು ಕೊಡೋಣ.

ಶ್ರೀ ಕೆ.ಎನ್.ರಾಜಣ್ಣ : ಮಾನ್ಯ ಅಧ್ಯಕ್ಷರೇ, ನಾನೂ ಕೂಡ 16ನೇ ತಾರೀಖು ತಮಗೆ ಪತ್ರವನ್ನು ಬರೆದು ಅವಕಾಶವನ್ನು ಕೊಡಬೇಕೆಂದು ಹೇಳಿದ್ದೇನೆ. ಈಗ ಅದನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ನಿಂತಿದ್ದೇನೆ. ಪ್ರಿವಿಲೇಜ್ ಸಂಬಂಧದ ಬಗ್ಗೆ. 16ನೇ ತಾರೀಖು ಕೊಟ್ಟ ಪತ್ರ ಇದುವರೆಗೂ ಉತ್ತರ ಕೊಟ್ಟಿಲ್ಲ. ಇವತ್ತು ಕರೆಯುತ್ತೀರಿ, ನಾಳೆ ಕರೆಯುತ್ತೀರಿ ಎಂದು ನಾನು ಸುಮ್ಮನೆ ಕುಳಿತಿದ್ದೇನೆ. ಇಲ್ಲಿ ಮಾತನಾಡುವವರು ಮಾತನಾಡುತ್ತಲೇ ಇರುತ್ತಾರೆ.

ಅಧ್ಯಕ್ಷರು : ಕೊಡೋಣ.

(ಗೊಂದಲ)

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೇ, ನೀವು ಕೇಳಿ, ಹೇಳಿ ಎಂದು ನಾನು ಹೇಳಿದ್ದೇನೆ. More then that .. ..

ಶ್ರೀ ಜೆ.ಸಿ.ಮಾಧುಸ್ವಾಮಿ : ದಯಮಾಡಿ ಕ್ಷಮಿಸಬೇಕು. **XX**

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮಗೂ ಜವಾಬ್ದಾರಿ ಇದೆ. ದಯವಿಟ್ಟು ನೀವು ಆ ರೀತಿ ಅರ್ಥ ಮಾಡಿಕೊಳ್ಳಬೇಡಿ. We are not here to pass the time. ನೀವು ಆ ರೀತಿ ಮಾತನಾಡಿದರೆ ನಮಗೆ ನೋವಾಗುತ್ತೆ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ, ನೀವು ಟೈಮ್ ಪಾಸ್ ಮಾಡುತ್ತೀರಿ ಎಂದು ಹೇಳಿದೆ

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಒಂದು ಬಿಲ್ explain ಮಾಡುವುದಕ್ಕೆ **XX** ಸರ್ಕಾರ ಇದು. ಮೇಲ್ಮನೆಯಲ್ಲಿ reject ಆಗಿದೆ.

(ಗೊಂದಲ)

ಶ್ರೀ ಡಿ.ಟಿ.ಜಯಕುಮಾರ್ : ಯೋಗ್ಯತೆ ಬಗ್ಗೆ ಮಾತನಾಡಬೇಡಿ. ಯೋಗ್ಯತೆ ಎಲ್ಲರಿಗೂ ಇದೆ. ತಾವು ಹಿರಿಯ ಸದಸ್ಯರಾಗಿದ್ದೀರಿ. ಯೋಗ್ಯತೆ ಬಗ್ಗೆ ಮಾತನಾಡಬೇಡಿ.

(ಗೊಂದಲ)

SRI J.C. MADHUSWAMY : ನೀವು ಅವರನ್ನು ಕಂಟ್ರೋಲ್ ಮಾಡಬೇಕು ಸಾರ್.

(ಗೊಂದಲ)

ಅಧ್ಯಕ್ಷರು : ಒಬ್ಬೊಬ್ಬರಾಗಿ ಮಾತನಾಡಿ

XX ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನನ್ನದು ಆದಮೇಲೆ ದಯವಿಟ್ಟು ಅವರನ್ನು ಕರೆಯಿರಿ. ಇಲ್ಲವೆಂದರೆ ನನಗೆ ಅವಕಾಶವನ್ನು ಕೊಡುವುದಿಲ್ಲವೆಂದು ಹೇಳಿ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ಇದು ಒಳ್ಳೆಯ ಸದಭಿರುಚಿಯ ಪದಗಳಲ್ಲ ಸಾರ್.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀರಾಮರೆಡ್ಡಿಯವರು ಬಹಳ ಹಿರಿಯ ಸದಸ್ಯರು. ಎಲ್ಲಾ ವಿಚಾರಗಳನ್ನು ಕಾನೂನು ಪುಸ್ತಕಗಳನ್ನು ತೆಗೆದು ಮಾತನಾಡುತ್ತಾರೆ. ಏನು ಪ್ರಪಂಚದಲ್ಲಿ ಇಲ್ಲದೇ ಇರುವ ಸೆಕ್ಷನ್‌ಗಳನ್ನೆಲ್ಲಾ ಇಲ್ಲಿ ಕೋಟ್ ಮಾಡುತ್ತಾರೆ. ಇಷ್ಟು ಹಿರಿಯ ಸದಸ್ಯರಾಗಿ ಈ ಸರ್ಕಾರದ ಬಗ್ಗೆ ಯೋಗ್ಯತೆ ಇಲ್ಲದೇ ಇರತಕ್ಕ ಸರ್ಕಾರ ಎಂದು ಮಾತನಾಡುತ್ತಾರಲ್ಲಾ ಇವರ ಯೋಗ್ಯತೆ ಎಷ್ಟು ಎಂದು ನಾವು ಪ್ರಶ್ನೆಯನ್ನು ಮಾಡಬೇಕಾಗುತ್ತದೆ. ಅದಕ್ಕೋಸ್ಕರ ನಾನು ಹೇಳುವುದು. ಅವರು ಹಿರಿಯರು. ದಯವಿಟ್ಟು ಅವರೇನು ಹೇಳಿದ್ದಾರೆ, ಅದನ್ನು ವಾಪಸ್ ತೆಗೆದುಕೊಳ್ಳಬೇಕು. ದಯವಿಟ್ಟು ಅದನ್ನು ವಾಪಸ್ ತೆಗೆದುಕೊಳ್ಳಿ. ನಾನು ಜಾಸ್ತಿ ಮಾಡುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಈಗಲೂ ಅದನ್ನೇ ಹೇಳುತ್ತೇನೆ. ಏಕೆಂದರೆ ....

(ಗೊಂದಲ)

ಶ್ರೀ ಡಿ.ಹೆಚ್. ಶಂಕರಮೂರ್ತಿ: XX

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾತನಾಡುತ್ತೇನೆ. ಏನು ಮಾಡುತ್ತೀರಿ?

(ಗೊಂದಲ)

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ, ಅವರೇನು ಹೇಳುತ್ತಿದ್ದಾರೆ ಎಂದರೆ ಅದನ್ನು ವಾಪಸ್ ತೆಗೆದುಕೊಳ್ಳುತ್ತೀರಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲ. ನಾನು ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು : ಆಯಿತು. ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಏತಕ್ಕೆ ಇಲ್ಲ ಎಂದು ನಾನು ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ, ದಯಮಾಡಿ ಕೇಳಿ, ಇಲ್ಲಿ ಯಾರೂ ಪರಿಪೂರ್ಣರಲ್ಲ. ನನ್ನ ಭಾವನೆಗಳನ್ನು ಹೇಳಿಬಿಡುತ್ತೇನೆ ಕೇಳಿ ಮಾನ್ಯ ಶ್ರೀರಾಮರೆಡ್ಡಿಯವರೇ, ನಿಮ್ಮದು ಅತಿ ಆಯಿತು. ಮಾತನಾಡುವಾಗ, ಪದಗಳನ್ನು ಉಪಯೋಗಿಸುವಾಗ ಎಚ್ಚರಿಕೆಯಿಂದ ಇರಬೇಕು ನಿಯಮ ನನಗೂ ಗೊತ್ತಿದೆ. ಜನಗಳಿಗೂ ಎಷ್ಟೋ ಸಾರಿ ಉಪಯೋಗಿಸಿದ್ದೀರಿ. ನಾನು ಎಷ್ಟೊಂದು ಸಾರಿ ಹೇಳಿದ್ದೇನೆ.

(ಗೊಂದಲ)

ಅಧ್ಯಕ್ಷರು : ಎಲ್ಲದಕ್ಕೂ ಒಂದು ಮಿತಿ ಬೇಕು. ಹಿರಿಯರು ಮಾರ್ಗದರ್ಶನ ಮಾಡಬೇಕು. ಪ್ರತಿಯೊಂದಕ್ಕೂ ಗಲಾಟೆ. ಇದೇನು?

ಶ್ರೀ ಜೆ.ಸಿ. ಮಾಧುಸ್ವಾಮಿ : ನಿಮ್ಮನ್ನು ಕೇಳುವುದಕ್ಕೆ ನಮಗೆ ಹಕ್ಕಿದೆ. ಅವರನ್ನು ಸುಮ್ಮನೆ ಇರಿ ಎಂದು ಹೇಳಿ ಸಾರ್.

XX ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ನೀವು ಏನು ಮಾತನಾಡುತ್ತೀರೋ ಮಾತನಾಡಿ.

(ಗೊಂದಲ)

SRI D.T. JAYAKUMAR : floor leader ಎಂದರೆ ಕಿರೀಟವಾ? ನಿಮಗೆ ಏನು ಕಿರೀಟ ಇಲ್ಲ. ನಿಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ್ದಾರೆ. ನಮ್ಮನ್ನೂ ಆಯ್ಕೆ ಮಾಡಿ ಕಳುಹಿಸಿದ್ದಾರೆ. ಇಲ್ಲಿ ಎಲ್ಲರೂ ಎಂ.ಎಲ್.ಎ.ಗಳೇ .

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ನಿಮಗೂ ಏನೂ ಕಿರೀಟ ಇಲ್ಲ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ಯಾರು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ಸುಮ್ಮನೆ ಈ ರೀತಿ ಗೊಂದಲ ಮಾಡುವುದರಲ್ಲಿ ಅರ್ಥ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: XX

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಅವರಂತೂ ಹಿಂದಕ್ಕೆ ತೆಗೆದುಕೊಳ್ಳಲಿಲ್ಲ. ದಯವಿಟ್ಟು ಶ್ರೀರಾಮರೆಡ್ಡಿಯವರು, ಹೇಳಿರುವ ಪದವನ್ನು ನೀವು ತೆಗೆದುಬಿಡಿ.

ಅಧ್ಯಕ್ಷರು : ಆಯಿತು. ನೋಡಿಬಿಟ್ಟು ತೆಗೆಸುತ್ತೇನೆ.

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್: XX

ಶ್ರೀ ವಾಟಾಳ್ ನಾಗರಾಜ್: XX

ಅಧ್ಯಕ್ಷರು : ಈ ರೀತಿಯಾದರೆ ಏನೂ ಪ್ರಯೋಜನವಾಗುವುದಿಲ್ಲ

ಶ್ರೀ ಜೆ.ಸಿ. ಮಾಧುಸ್ವಾಮಿ : **XX** You are the custodian of the House.

(ಗೊಂದಲ)

ಅಧ್ಯಕ್ಷರು : ನಾನು ನಿಯಮದ ಪ್ರಕಾರವೇ ಮಾಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ಸದನವನ್ನು ನಡೆಸಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: XX

ಶ್ರೀ ವಾಟಾಳ್ ನಾಗರಾಜ್ : ಚರ್ಚೆ ಇಲ್ಲದೇ ಮಸೂದೆ ಪಾಸ್ ಮಾಡುವುದಾ? ಏನು ಸಾರ್ ತಾವು ಹೇಳಿ.

ಅಧ್ಯಕ್ಷರು : ಸದನ ದಾರಿ ತಪ್ಪಿ ಹೋಗುತ್ತಿದೆ. ಸದನ ದಾರಿ ತಪ್ಪಿ ಹೋಗದ ರೀತಿಯಲ್ಲಿ ಎಲ್ಲರೂ ಸಹಕರಿಸಬೇಕು. ಪರಸ್ಪರ ಎಲ್ಲರೂ ಸಹಕರಿಸಿದರೆ ಎಲ್ಲಾ ಸರಿಹೋಗುತ್ತದೆ.

(ಗೊಂದಲ)

ಅಧ್ಯಕ್ಷರು : ನೀವು ಏನು ಬೇಕಾದರೂ ಮಾತನಾಡಿ. ಯಾವುದರ ರೆಕಾರ್ಡ್‌ಗೆ ಹೋಗುವುದಿಲ್ಲ.

XX ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಅಧ್ಯಕ್ಷರು : ಚರ್ಚೆಗೆ ಅವಕಾಶಕೊಟ್ಟು ನೀವು ಮಾತನಾಡುವುದೆಲ್ಲಾ ಮಾತನಾಡಿ ಎಂದೆ. ಆಮೇಲೆ ನೀವು ಏನು ಹೇಳಬೇಕು ಹೇಳಿ ಎಂದೆ. ಆಮೇಲೆ ಇವರಿಗೆ ಏನು ಹೇಳಬೇಕೋ ಹೇಳಿ ಎಂದೆ. ಆದರೆ ಇನ್ನೇನೂ ಮಾಡಲು ಸಾಧ್ಯವಾಗುವುದಿಲ್ಲ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : XX

ಅಧ್ಯಕ್ಷರು : ನೀವು ಹೀಗೆಯೇ ಎಕ್ಸ್‌ಪ್ಲೈನ್ ಮಾಡಬೇಕು? ಎಂದು ಹೇಳುವುದಕ್ಕೆ ಆಗುವುದಿಲ್ಲ. ನೀವು ಮಾತನಾಡುವುದಕ್ಕೆ ಅವಕಾಶ ಕೇಳಿದಾಗ ಮಾತನಾಡಿ ಎಂದು ನಾನು ಅವಕಾಶ ಮಾಡಿಕೊಟ್ಟೆ. ಅವರ ಮಾತು ಕೇಳಿ ಎಂದು ಅವಕಾಶ ಮಾಡಿಕೊಟ್ಟೆ. ಕನ್‌ವಿನ್ಸ್ ಆಯಿತು ಎಂದೆಲ್ಲಾ ಮಾಡುವುದಕ್ಕೆ ಆಗುತ್ತದಾ?

ಶ್ರೀ ವಾಟಾಳ್ ನಾಗರಾಜ್ : ಮಸೂದೆ ಏಕೆ ತರುತ್ತಿದ್ದೇವೆ ಎಂಬ ಬಗ್ಗೆ ವಿವರಣೆಯನ್ನೂ ನಾವು ಕೇಳುವುದು. ಯಾವುದಕ್ಕೋಸ್ಕರ ಮಸೂದೆಯನ್ನು ಇಲ್ಲಿ ಮಂಡಿಸುತ್ತಿದ್ದೇವೆ? ಈ ಕಾರಣಕ್ಕೋಸ್ಕರವಾಗಿ ಎಂದು ಅವರು ಹೇಳಬೇಕು ತಾನೇ?

ಶ್ರೀ ಜಗದೀಶ್ ಶೆಟ್ಟರ್ : ಅದನ್ನೇ ನಾವು ಚರ್ಚೆ ಮಾಡುವುದು.

ಅಧ್ಯಕ್ಷರು : ಮಾನ್ಯ ಸಂಸದೀಯ ಸಚಿವರು ಏನೋ ಹೇಳುತ್ತಾರೆ ಕೇಳಿ.

ಶ್ರೀ ಬಸವರಾಜ ಹೊರಟ್ಟಿ (ಸಂಸದೀಯ ವ್ಯವಹಾರಗಳು ಹಾಗೂ ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ, ಬಿಲ್ ಅನ್ನು ಮಂಡನೆ ಮಾಡಿದ್ದಾರೆ. ಬಹಳವಾಗಿ ಚರ್ಚೆ ಆಗಿದೆ. ಚರ್ಚೆ ಮಾಡುವುದರಲ್ಲಿ, ಮಾತನಾಡುವುದರಲ್ಲಿ ಹೆಚ್ಚು ಕಡಿಮೆ ಆಗಿದೆ. ಇವತ್ತು ತಾವು ತೀರ್ಮಾನ ಕೊಟ್ಟಿದ್ದೀರಿ. ನಾನು ಹೇಳುತ್ತೇನೆ. ತಮ್ಮ ತೀರ್ಮಾನಕ್ಕೆ ನೀವು ಯಾವ ರೀತಿ ತೀರ್ಮಾನ ಕೊಟ್ಟಿರಿ ಎಂದು ಕೇಳುವುದು ಸರಿಯಲ್ಲ. ಒಂದು ಸಾರಿ ಸಭಾಧ್ಯಕ್ಷರು ತೀರ್ಮಾನವನ್ನು ಕೊಟ್ಟ ನಂತರ ಆ ತೀರ್ಮಾನವನ್ನು ಪ್ರಶ್ನಿಸಲು ಬರುತ್ತದೋ ಅಥವಾ ಇಲ್ಲವೋ ಎಂದು ಮೊದಲು ಹೇಳಬೇಕು. ತಾವು ಶ್ರೀ ರಮೇಶ್‌ಕುಮಾರ್‌ರವರೂ ಅಧ್ಯಕ್ಷರಾಗಿ ಕೆಲಸ ಮಾಡಿದ್ದೀರಿ. ನಾನು ಸರಿಯೋ ತಪ್ಪೋ ಎಂದು ಹೇಳುವುದಿಲ್ಲ. ಬಿಲ್ ಈಗ ಪಾಸ್ ಆಗಿದೆ. ಬಿಲ್ ಪಾಸ್ ಆದ ನಂತರ ನೀವು ಹೇಗೆ ಮಾಡಿದಿರಿ ಎಂದು ಪ್ರಶ್ನೆ ಮಾಡುವುದು ಯಾವ ನಿಯಮದ ಪ್ರಕಾರ ಇದೆ ಎಂದು ನನಗೆ ಹೇಳಿ. ಯಾವ ನಿಯಮದ ಪ್ರಕಾರ ಮಾನ್ಯ ಅಧ್ಯಕ್ಷರ ತೀರ್ಮಾನವನ್ನು ಪ್ರಶ್ನೆ ಮಾಡಲು ಅವಕಾಶ ಇದೆ ಎಂದು ತಾವು ಹೇಳಿ.

ಶ್ರೀ ಕೆ. ಆರ್. ರಮೇಶ್ ಕುಮಾರ್ : ಸನ್ಮಾನ್ಯ ಅಧ್ಯಕ್ಷರೆ, ಈ ಶಾಸನ ಸಭೆಯ ಸಂಸದೀಯ ಪ್ರಜಾಪ್ರಭುತ್ವದ ಮೂಲ ಹಕ್ಕು, ಕರ್ತವ್ಯ, ಜವಾಬ್ದಾರಿ ಶಾಸನ ಮಾಡ ತಕ್ಕದ್ದು. ಉಳಿದ ಎಲ್ಲಾ ಕೆಲಸವನ್ನೂ ಕೂಡ ನಾವು ನಮ್ಮ ಮೇಲೆ ಹಾಕಿಕೊಂಡು ಮಾಡುವುದೇ ಹೊರತು ಮೂಲ ಕೆಲಸ ಶಾಸನ ಮಾಡುವುದು. ನಮ್ಮ ದಿನನಿತ್ಯದ ಕ್ರಮದಲ್ಲಿ ಹೇಗೆ ಆಗುತ್ತಾ ಬಂದಿದೆ ಎಂದರೆ ಶಾಸನ ಮಾಡತಕ್ಕಂಥ ಕೆಲಸವನ್ನು ಬಹಳ ಕಡಿಮೆ ಮಾಡಿ ಉಳಿದ ಎಲ್ಲಾ ಕೆಲಸಗಳನ್ನು ಹೆಚ್ಚು ಮಾಡುತ್ತೇವೆ. ಇದು ದುರಾದೃಷ್ಟ. ಒಂದು ವಿಧೇಯಕವನ್ನು ಮಾನ್ಯ ಉಪ ಮುಖ್ಯ ಮಂತ್ರಿಗಳು ಮಂಡಿಸಿದ್ದಾರೆ. ವಿಧೇಯಕವನ್ನು ನಮಗೆ ವಿವರಿಸಬೇಕು, ಕಾರಣಗಳನ್ನು ಹೇಳಬೇಕು. ಎಲ್ಲವನ್ನೂ ನಮಗೆ ಸಮಜಾಯಿಷಿ ಮಾಡಬೇಕು ಎಂದು ಪ್ರತಿಪಕ್ಷದ ಮುಖಂಡರುಗಳಾದಂತಹ ಶೀಮಾನ್

XX ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀರಾಮ ರೆಡ್ಡಿಯವರು, ಮಾನ್ಯ ಮಾಧುಸ್ವಾಮಿಯವರು ವಾಟಾಳ್ ನಾಗರಾಜ್ ಎಲ್ಲರೂ ಕೇಳುತ್ತಿದ್ದಾರೆ. ನಾನು ನಮ್ರತೆಯಿಂದ ತಮ್ಮಲ್ಲಿ ಕೇಳುತ್ತಿದ್ದೇನೆ. ತಮಗೆ ಯಾವುದೇ ವಿಧವಾದ ಆಪಾದನೆಯನ್ನು ಮಾಡದೇ ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ. ಎಲ್ಲೋ ಒಂದು ಕಡೆಗೆ ತಾವು ಸ್ವಲ್ಪ ಆತುರ ಪಟ್ಟಿರಿ. ಮಾನ್ಯ ಮಂತ್ರಿಗಳು ವಿವರಣೆಯನ್ನೂ ಕೊಡತಕ್ಕಂಥ ಜವಾಬ್ದಾರಿ ಅವರ ಮೇಲೆ ಇದೆ. ಅವರು ಉತ್ತರವನ್ನು ಕೊಡದೇ, ವಿವರಣೆಯನ್ನು ಕೊಡದೇ ಇರತಕ್ಕ ಹಂತದಲ್ಲಿ ಇವರ ಹಕ್ಕು ಪರಿಪೂರ್ಣವಾಗಿ ಈಡೇರದೇ ಇದ್ದಂತಹ ಸಂದರ್ಭದಲ್ಲಿ ಮತದಾನಕ್ಕೆ ಹೊರಟು ಹೋಯಿತು. ಅದಕ್ಕೇ ಅವರು ಸ್ವಲ್ಪ ಆಕ್ರೋಶಗೊಂಡಿದ್ದಾರೆ. ಮಾನ್ಯ ಹೊರಟ್ಟಿಯವರಿಗೆ ನಾನು ಇಷ್ಟೇ ಹೇಳುತ್ತೇನೆ. ತಾವು ಯಾವುದೇ ಒಂದು ವಿಷಯದಲ್ಲಿ ರೂಲಿಂಗ್ ಕೊಟ್ಟರೆ ಪುನರ್ ವಿಮರ್ಶೆ ಮಾಡಿಕೊಳ್ಳಿ ಎಂದು ತಮ್ಮಲ್ಲಿ ಕೇಳಿಕೊಳ್ಳಬಹುದು. ನಿಮ್ಮ ರೂಲಿಂಗನ್ನು ಪ್ರಶ್ನೆಮಾಡತಕ್ಕದ್ದಲ್ಲ. ಇಲ್ಲಿ ಏನಾಗುತ್ತದೆ ಎಂದರೆ ಸದನದ ಮಾನ್ಯ ಸದಸ್ಯರ ಮೂಲಭೂತ ಹಕ್ಕು ಮುಖ್ಯವಾದದ್ದು. ಒಂದು ವಿಧೇಯಕವನ್ನು ಮಾನ್ಯ ಮಂತ್ರಿಗಳು ಮಂಡನೆ ಮಾಡಿದಾಗ, ವಿಧೇಯಕದ ಬಗ್ಗೆ ವಿವರಣೆ ಕೇಳಿದಾಗ, ವಿವರಣೆಗೆ ಅವಕಾಶ ಇಲ್ಲದಂತೆ ಮಾನ್ಯ ಮಂತ್ರಿಗಳು ಯಾರು ವಿಧೇಯಕವನ್ನು ಮಂಡಿಸಿದರು. ಅವರು ತಮ್ಮ ಜವಾಬ್ದಾರಿಯನ್ನು ಪೂರ್ಣ ನಿರ್ವಹಿಸದೇ, ಮಾನ್ಯ ಸದಸ್ಯರ ಹಕ್ಕು ಪೂರ್ಣ ಜೀರ್ಣಗೊಳ್ಳದೇ ಮತದಾನದ ಹಂತಕ್ಕೆ ಹೋಗುವುದು ತಪ್ಪಾಗುತ್ತದೆ. ನಾನು ಹೇಳತಕ್ಕದ್ದು ಇವತ್ತು ನೀವು ಅಲ್ಲಿ ಇದ್ದಿರಿ, ನಾವು ಇಲ್ಲಿದ್ದೇವೆ. ನಾನು ಹೇಳುವುದು ನಾಳೆ ನಾವು ಸದನಕ್ಕೇ ಬಾರದೇ ಹೋಗಬಹುದು. ತಪ್ಪು ಪ್ರಿಸಿಡೆಂಟ್ಸ್‌ಗೆ ನಾವು ಇಲ್ಲಿ ಯಾರೂ ಅವಕಾಶ ಮಾಡಬಾರದು. ಆವಾಗ ಮಾನ್ಯ ಅಧ್ಯಕ್ಷರು ಒಂದು ಮಾತನ್ನು ಹೇಳಿದರು. ನಾವ್ಯಾರೂ ಪರಿಣತರು ಅಲ್ಲ; ಎಕ್ಸ್‌ಪರ್ಟ್ಸ್ ಅಲ್ಲ ಎಂದು. ನಾವು ಕಲಿತುಕೊಳ್ಳುತ್ತಾ ಹೋಗುತ್ತೇವೆ. ಕೆಲವು ಸಲ ತಪ್ಪುಗಳು ಆಗುತ್ತವೆ. ಉದ್ದೇಶ ಪೂರ್ವಕವಾಗಿ ತಪ್ಪು ಮಾಡಿದರೆ ಅದು ಬಹಳ ದೊಡ್ಡ ಅಪರಾಧ ಆಗುತ್ತದೆ. ಒಂದೊಂದು ಸಲ ನಮಗೆ ಸದುದ್ದೇಶ ಇದ್ದರೂ ಕೂಡ ಕೆಲವೊಮ್ಮೆ ನಮಗೆ ಗೊತ್ತಿಲ್ಲದ್ದೇ ತಪ್ಪುಗಳು ಆಗಬಹುದು. ನನ್ನ ಅಭಿಪ್ರಾಯ ಏನು ಎಂದರೆ ಅದನ್ನು ಬೆಳೆಸಿಕೊಂಡು ಹೋಗತಕ್ಕದ್ದು ಬೇಡ. ಮಾನ್ಯ ಮಾಧುಸ್ವಾಮಿಯವರು ಕೇಳಿದ್ದು ಅದನ್ನೇ. ನಮ್ಮ ಹಕ್ಕು ಉಲ್ಲಂಘನೆ ಆಗಿದೆ ಎಂದು, ಹೌದಲ್ಲವಾ? ಅದಕ್ಕೇ ಅವರು ಸ್ವಲ್ಪ ಆಕ್ರೋಶದಲ್ಲಿ ಯಾವ ನಿಯಮದಲ್ಲಿ ಸಭೆಯನ್ನು ನಡೆಸುತ್ತಿದ್ದೀರಿ? ಸಭೆಯನ್ನು ವ್ಯವಸ್ಥಿತವಾಗಿ ನಡೆಸಿ ಎಂದು ಕೇಳಿದರು. ನನ್ನ ಭಾವನೆಯಲ್ಲಿ ಮಾನ್ಯ ಅಧ್ಯಕ್ಷರು ಯಾವುದೇ ದುರುದ್ದೇಶ ಇಲ್ಲದೇ ಕೆಲಸ ಆಗಲಿ, ಬೆಳಿಗ್ಗೆಯಿಂದ ಅವರು ಕಾಯುತ್ತಿದ್ದಾರೆ, ಆ ಮನೆಗೆ ಹೋಗಿ ಬಿಲ್ ಪಾಸ್ ಆಗಿಬರಲಿ ಎಂಬ ಒಂದೇ ಒಂದು ಉದ್ದೇಶದಿಂದ ತಾವು ತರಾತುರಿಯಲ್ಲಿ ಮಾಡಿದ್ದೀರಿ ಎಂದು ಅಂದುಕೊಂಡಿದ್ದೇನೆಯೇ ಹೊರತು ನಿಮಗೆ ಇವರ ಹಕ್ಕನ್ನು ಕಸಿಯಬೇಕು ಅಥವಾ ನಾವು ಹೊಸ ಪದ್ಧತಿಯನ್ನು ಹಾಕಬೇಕೆಂಬ ಉದ್ದೇಶ ಇಲ್ಲ ಎನ್ನತಕ್ಕದ್ದು ನನ್ನ ಖಚಿತವಾದಂತಹ ಭರವಸೆ. ಅವರಲ್ಲೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅದನ್ನು ದೊಡ್ಡದು ಮಾಡುವುದು ಬೇಡ. ಆದದ್ದು ಆಯಿತು. ನೋಡಿ ಮಾನ್ಯ ವೆಂಕಟೇಶ್ ಅವರೇ, ನಾನು ಒಂದು ಮಾತನ್ನು ಹೇಳುತ್ತೇನೆ. ನಮ್ಮ ಸಂಸದೀಯ ವ್ಯವಹಾರಗಳ ಪದ್ಧತಿಯಲ್ಲಿ ಮೊದಲಿನಿಂದ ಬೇರೆ ಟೈಟಲ್ಸ್ ಇತ್ತು. ಈಗ ಒಂದು, ನೋಂದಾಯಿತ ರಾಜಕೀಯ ಪಕ್ಷದಿಂದ ಒಬ್ಬರೇ ಸದಸ್ಯರು ಆರಿಸಿ ಬಂದರೂ ಕೂಡ He becomes the Legislature Party of that Political

Party in the House. ಸಂಖ್ಯಾಬಲದ ದೃಷ್ಟಿಯಿಂದ ಒಂದು ಪಕ್ಷದವರು ಒಬ್ಬರು ಇದ್ದಾರೆ, ನಾವು ಹತ್ತು ಜನ ಇದ್ದೇವೆಂದು ಹೇಳಿ ಕೂಗತಕ್ಕದ್ದು, ವಾಯ್ಸ್‌ನ್ನು ಡಿಫ್ಯೂಸ್ ಮಾಡತಕ್ಕದ್ದು ಒಳ್ಳೆಯ ಲಕ್ಷಣವಲ್ಲ. ನಾವು ಕಂಠಾಬಲದಿಂದ, ಖಂಡ ಬಲದಿಂದ ಅಸೆಂಬ್ಲಿಯನ್ನೂ ನಡೆಸುವುದಾದರೆ ನಾವೆಲ್ಲಾ ಏಕೆ ಇಲ್ಲಿ ಬರಬೇಕು? ಹೊರಗಡೆ ಇಷ್ಟು ಜನ ಇದ್ದಾಗ . .

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜ್ : ಅವರು ಬಳಸಿದಂಥ ಪದಗಳು ಯೋಗ್ಯ ಇದೆಯಾ ಇಲ್ಲವಾ ಎಂಬುದನ್ನೂ ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ ಯೋಗ್ಯವಾದಂತಹ ಪದಗಳ ಬಳಕೆ ಇದೆಯಾ? ಏಕೆಂದರೆ ಆವೇಶದಲ್ಲಿ ಅಲ್ಲ .

(ಗೊಂದಲ)

ಶ್ರೀ ಸಿ.ಟಿ. ರವಿ : ಮಾನ್ಯ ರಮೇಶ್‌ಕುಮಾರ್ ಅವರು ಬುದ್ಧಿ ಹೇಳುತ್ತಿರುವುದು ಸರಿ ಇದೆ.

(ಗೊಂದಲ)

ಶ್ರೀ ಕೆ. ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರನ್ನು ಕುರಿತು ಸಂಬೋಧನೆ ಮಾಡುವಾಗ ಸಂವೇದನೆ ಇರಬೇಕಾಗುತ್ತದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಸಾರ್, ತಾವು ಹೇಳಿದ್ದೆಲ್ಲಾ ಸತ್ಯ. ಹೊಸ ಸದಸ್ಯರು ಈ ರೀತಿ ಅವರ ಆಕ್ರೋಶವನ್ನು ತೋರಿಸುತ್ತಿರುವುದರ ಬಗ್ಗೆ ತಾವೂ ಕೂಡ ಅದನ್ನೂ ಪ್ರಸ್ತಾಪ ಮಾಡುತ್ತಿದ್ದೀರಿ. ಯಾರು ಈ ರೀತಿ ಬುದ್ಧಿವಾದ ಹೇಳುತ್ತಾರೋ, ಬುದ್ಧಿವಾದ ಹೇಳಿದಂತಹ ವ್ಯಕ್ತಿಗಳೇ ತಪ್ಪು ಮಾಡಿದಾಗ ತಡೆದುಕೊಳ್ಳಲಾರದೆ ಅವರೆಲ್ಲಾ ಆಕ್ರೋಶ ವ್ಯಕ್ತ ಮಾಡಿದ್ದಾರೆ. ಇಲ್ಲಿ ಎರಡು ಅಂಶ ಇದೆ, ತಾವೇ ಕ್ಲಿಯರ್ ಮಾಡಿ ಸಾರ್. ಮಾನ್ಯ ರಮೇಶ್ ಕುಮಾರ್ ಅವರನ್ನು ತಮ್ಮ ಮೂಲಕ ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು, ಅಧ್ಯಕ್ಷರು ರೂಲಿಂಗ್ ಕೊಟ್ಟರು ಸಾರ್, ಬಿಲ್ ಪಾಸ್ ಆಯಿತಲ್ಲಾ? ಘೋಷಣೆ ಮಾಡಿ ಆಯಿತು. ಇದನ್ನು ಯಾವ ನಿಯಮದ ಪ್ರಕಾರ ಮಾಡಿದಿರಿ? ತಪ್ಪು ದಾರಿಗೆ – ಈ ಸದನವನ್ನು ತೆಗೆದುಕೊಂಡು ಹೋಗುತ್ತಿದ್ದೀರಿ? ಎಂದು ನೇರ ಆಪಾದನೆ ಇದೆ. ಇಲ್ಲಿ ಹಿಂದೆ ಮುಂದೆ ಇಲ್ಲ. ತಾವು ಹೇಳಿದ ಹಾಗೆ ಬಹಳ ಸೌಮ್ಯ ಭಾಷೆಯಲ್ಲಿ ತಾವೇನು ಹೇಳಿದಿರಿ, ಅದನ್ನು ಮರು ಪರಿಶೀಲನೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇವೆ ಎನ್ನುವ ಪದಕ್ಕೂ, ತಾವು ಈ ಸದನವನ್ನು ತಪ್ಪು ದಾರಿಗೆ ತೆಗೆದುಕೊಂಡು ಹೋಗುತ್ತಿದ್ದೀರಿ ಎಂದರೆ ಇದಕ್ಕೂ ಏನಾದರೂ ವ್ಯತ್ಯಾಸ ಇದೆಯಾ ಎಂದು ತಾವು ತಿಳಿಸಬೇಕು. ಎರಡನೆಯದು – ಈ ಸರ್ಕಾರ ತಾವು ಹೇಳಿದ ಹಾಗೆ ರಾಷ್ಟ್ರೀಯ ಪಕ್ಷಗಳಿಗೆ ಸಂಖ್ಯೆ ಲೆಕ್ಕ ಮುಖ್ಯ ಅಲ್ಲ. ಒಬ್ಬರೇ ಬಂದರೂ ಅವರು ಒಂದು ಪಕ್ಷದ ಪ್ರತಿನಿಧಿ. ನಾವು ಇಷ್ಟೊಂದು ಜನ ಬಂದಿರುವುದೂ ಸರಿ. ಒಬ್ಬ ವ್ಯಕ್ತಿ ರಾಷ್ಟ್ರೀಯ ಪಕ್ಷದಿಂದ ಬಂದಿರುವಂತಹ ವ್ಯಕ್ತಿ ಈ ರೀತಿ ಹೇಳುವುದನ್ನೂ ತಾವು ಒಪ್ಪುತ್ತೀರಾ? ಇವರೆಡನ್ನೂ ಕ್ಲಾರಿಫೈ ಮಾಡಿದರೆ ಸಾಕು. ಅವರು ಉತ್ತರ ಕೊಡಲಿ. ಅವರು ಹೇಳಿ ಬಿಡಲಿ ಅಷ್ಟೇ . .

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ರಮೇಶ್ ಕುಮಾರ್ ಅವರು ಹಿರಿಯರು ನಾನು ಅದಕ್ಕೋಸ್ಕರ ಹೇಳುತ್ತಿದ್ದೇನೆ. ನಾನು ತಮಗೆ ಏಕೆ ಹೇಳುತ್ತಿದ್ದೇನೆಂದರೆ ಪ್ರತಿ ಬಾರಿನೂ ಕೂಡ . .

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಮಾತನಾಡುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ : ನೀವು ಆಮೇಲೆ ಮಾತನಾಡಿ ಸಾರ್. ಏಕೆಂದರೆ ಅವರು ಮಾತನಾಡುತ್ತಿರಬೇಕಾದರೆ ನಾನು ಮಧ್ಯೆ ಬಾಯಿ ಹಾಕಲಿಲ್ಲ. ನಾನು ಅವರ ಬಗ್ಗೆ ಸಾಕಷ್ಟು ಗೌರವವನ್ನು ಇಟ್ಟುಕೊಂಡಿದ್ದೇನೆ. ತಮಾಷೆಗೆ ಅಲ್ಲ ಸಾರ್, ಸತ್ಯ ಹೇಳುತ್ತೇನೆ. ತಾವು ಶ್ರೀ ರಮೇಶ್‌ಕುಮಾರ್ ಸ್ಪೀಕರ್ ಆಗಿರುವಂತಹ ಸಂದರ್ಭದಲ್ಲಿ ಯಾವ್ಯಾವ ರೀತಿ ರೂಲಿಂಗ್ ಕೊಟ್ಟಿದ್ದೀರಿ? ನೀತಿ ನಿಯಮವನ್ನು ಯಾವ ರೀತಿ ಹೇಳುತ್ತಿದ್ದೀರಿ? ಶಾಸಕರನ್ನು ಯಾವ ರೀತಿ ಶಿಸ್ತಿನಲ್ಲಿ ತೆಗೆದುಕೊಳ್ಳುತ್ತಿದ್ದಿರಿ? ಇವೆಲ್ಲಾ ನೋಡಿ ತುಂಬಾ ಸಂತೋಷ ಪಟ್ಟಿರುವವನು ನಾನು. ಮಾನ್ಯ ಶ್ರೀರಾಮ ರೆಡ್ಡಿಯವರು ಈ ಮಾತುಗಳನ್ನು ಹೇಳಿದರೆ ನಾನು ಕೇಳುತ್ತಿರಲಿಲ್ಲ. ನಾನು ಅವರ ಭಾಷೆಯಲ್ಲಿಯೇ ಉತ್ತರವನ್ನು ಕೊಟ್ಟಿದ್ದೇನೆ. ನಾನು ನಿಮಗೆ ಕೇಳುತ್ತಿರುವುದು ಈ ಎರಡೂ ಪ್ರಶ್ನೆಗಳಿಗೆ ಮಾನ್ಯ ಅಧ್ಯಕ್ಷರೆ, ನಮಗೆ ಉತ್ತರಬೇಕು ತಮ್ಮ ಮುಖಾಂತರ ನಾನು ಮನವಿ ಮಾಡುತ್ತೇನೆ, ಅವರು ಉತ್ತರ ಕೊಡಲಿ.

ಶ್ರೀ ಕೆ. ಆರ್. ರಮೇಶ್ ಕುಮಾರ್ : ನಾನೇನು ಹೇಳಿದೆ ಅಂದರೆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸಂಸದೀಯ ವ್ಯವಹಾರದಲ್ಲಿ ಭಾಷೆಯ ಬಳಕೆ ಕೂಡ ಒಂದು ಕಲೆ. ಇದೇ ಸದನದಲ್ಲಿ ಮಾನ್ಯ ನಿಜಲಿಂಗಪ್ಪನವರು ಅಲ್ಲಿ ಕುಳಿತಿದ್ದಾಗ, ನಾನು ಆಗ ಸದನದಲ್ಲಿ ಇರಲಿಲ್ಲ ಅದು ಕಡತಗಳಲ್ಲಿದೆ. ಮಾನ್ಯ ಶಾಂತವೇರಿ ಗೋಪಾಲ ಗೌಡರು ಅವರಿಗೆ ಏನು ಹೇಳುತ್ತಾರೆ ಎಂದರೆ "ನಿಮ್ಮನ್ನು ನಾನು ಮುಂಡೇ ಮಕ್ಕಳು" ಎಂದು ಬಯ್ಯುವುದಕ್ಕೆ ಆಗುವುದಿಲ್ಲ ಎಂದು. ಮುತ್ತೈದೆಯರಿಗೆ ಇಂತಹ ಮಕ್ಕಳು ಇರುತ್ತಾರೆಯೇ?" ಎಂದು ಕೇಳುತ್ತಾರೆ. ಶ್ರೀಮಾನ್ ಜೆ. ಹೆಚ್. ಪಟೇಲರು ಎರಡನೇ ಸಾಲಿನಲ್ಲಿ ಕುಳಿತಿದ್ದರು. ದಿವಂಗತ ಕೆ. ಪ್ರಭಾಕರ್‌ರವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ, ಅವರ ಡಿಪಾರ್ಟ್‌ಮೆಂಟ್ ಗ್ರಾಂಟ್ಸ್ ಅನ್ನು ಮಂಡನೆ ಮಾಡಿದಾಗ, ಅವರು ಏನು ಹೇಳಿದರು ಎಂದರೆ, ಮೂರು ಪೈಸೆಗೂ ಕೂಡ ನಿಮ್ಮ ಬೇಡಿಕೆ ಲಾಯಕ್ ಅಲ್ಲವೆಂದು ಹೇಳಿದರು. ಅಂದುಬಿಟ್ಟು ನಾಲಾಯಕ್ ಎಂದರೆ ಪಾಪ, ನಿಮಗೆ ಸಿಟ್ಟು ಬರುತ್ತದೆ, ಆದ್ದರಿಂದ, ಲಾಯಕ್ ಅಲ್ಲವೆಂದು ಹೇಳಿದ್ದೇನೆಂದರು. It is nothing but a tact.

ಶ್ರೀ ಕೆ. ಎಸ್.ಈಶ್ವರಪ್ಪ : ನೀವು ಸಮರ್ಥನೆ ಮಾಡುತ್ತಿದ್ದೀರಾ?

ಶ್ರೀ ಕೆ. ಆರ್. ರಮೇಶ್‌ಕುಮಾರ್ : ದಯಮಾಡಿ ಕೇಳಿ. ತಾಳ್ಮೆ ಇಟ್ಟುಕೊಳ್ಳಬೇಕು. ನಾನು ಏನು ಹೇಳುತ್ತೇನೆಂದರೆ, ತಮಗೆ ಅವರು ಬಳಸಿದ ಪದದಿಂದ ನೋವಾದರೆ, ತಮಗೆ ಉಳಿದಿರುವ ಮಾರ್ಗ, ಮಾನ್ಯ ಅಧ್ಯಕ್ಷರಲ್ಲಿ ತಾವು ಏನು ನಿವೇದಿಸಿಕೊಳ್ಳಬೇಕೆಂದರೆ, ಅದು ಸಂಸದೀಯವೇ? ಬಳಕೆಗೆ ಅರ್ಹವಾದ ಪದವೇ? ಅಲ್ಲವೇ? ಎಂದು. ಈಗ ಪಾರ್ಲಿಮೆಂಟರಿ ಯಾವುದು, ಅನ್‌ಪಾರ್ಲಿಮೆಂಟರಿ ಯಾವುದು ಎಂದು ನೋಡುವುದಕ್ಕೆ ನಮ್ಮಲ್ಲಿ ಒಂದು ಪದಕೋಶವಿದೆ. ಮಾನ್ಯ ಅಧ್ಯಕ್ಷರು ಅದನ್ನು ತಕ್ಷಣ ತರಿಸಿ ನೋಡುತ್ತಾರೆ. ಆ ಪದಕೋಶದಲ್ಲಿ

ಇದನ್ನು Presiding Officers Conference ನಲ್ಲಿ ಹಲವಾರು ವರ್ಷಗಳ ಅನುಭವದ ಆಧಾರದ ಮೇಲೆ ಇಂತಹ ಪದಗಳನ್ನು ಸದನದಲ್ಲಿ ಉಪಯೋಗ ಮಾಡಬಹುದು, ಇಂತಹ ಪದಗಳನ್ನು ಉಪಯೋಗ ಮಾಡಬಾರದು ಎಂದು ಇದೆ. ಆ particular ಪದಕ್ಕೆ ನಾನು ವ್ಯಾಖ್ಯಾನ ಕೊಡುತ್ತಿಲ್ಲ. ನಾನು ತಮ್ಮಲ್ಲಿ ಏನು ವಿನಂತಿಸಿಕೊಳ್ಳುತ್ತಿರುವುದೇನೆಂದರೆ . . .

ಶ್ರೀ ಕೆ.ಎಸ್.ಈಶ್ವರಪ್ಪ : ಮತ್ತೆ ನಾನು ನಿಮಗೆ ಕ್ಲಾರಿಫೈ ಮಾಡುತ್ತಿದ್ದೇನೆ. ನೀವು ಈಗ ಬಹಳ ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡಿದ್ದೀರಿ.

ಶ್ರೀ ಕೆ. ಆರ್. ರಮೇಶ್‌ಕುಮಾರ್ : ನೀವು ಕೇಳಲೇ ಇಲ್ಲವಲ್ಲಾ ನಾನೇನು ಮಾಡಲಿ? ನಾನು ಎಷ್ಟು calm ಆಗಿ ಕೇಳಿದೆ.

ಶ್ರೀ ಕೆ. ಎಸ್. ಈಶ್ವರಪ್ಪ : ನಾನೂ calm ಆಗಿಯೇ ಕೇಳಿದೆ. Calm ಆಗಿ ಕೇಳುವ ರೀತಿಯಲ್ಲೇ ನಮಗೆ ನೀವು ಉತ್ತರ ಕೊಡುತ್ತಿಲ್ಲ ಅದಕ್ಕೇ ನನಗೆ ಬೇಜಾರಾಗುತ್ತಿರುವುದು . . .

ಶ್ರೀ ಕೆ. ಆರ್. ರಮೇಶ್‌ಕುಮಾರ್ : ದಯವಿಟ್ಟು ನಾನು ಏನು ಹೇಳುತ್ತೇನೆ ಎಂಬುದನ್ನು ಕೇಳಿ. ಅಧ್ಯಕ್ಷರೆ, ಸನ್ಮಾನ್ಯ ಅಧ್ಯಕ್ಷರನ್ನು ಉದ್ದೇಶಿಸಿ ಯಾವುದೇ ಸದಸ್ಯರು ಈ ಸದನದಲ್ಲಿ ಮಾತನಾಡುವಾಗ ಎಲ್ಲರೂ ತಮ್ಮನ್ನು ಹೊಗಳಿ ಹಾಗೇ ಮಾತನಾಡಬೇಕೆಂದೇನೂ ಇಲ್ಲ. ಅವರನ್ನು ವಿರೋಧಿಸಿ ಮಾತನಾಡುವಾಗಲೂ ಕೂಡ ಎಚ್ಚರ ಎಲ್ಲಿರಬೇಕೆಂದರೆ, ಸಂಭೋದನೆ ಮಾಡುವಾಗಲೂ ಕೂಡ ಗೌರವದಿಂದ ಅವರನ್ನು ಸಂಭೋದನೆ ಮಾಡುತ್ತೇವೆ. ಈಗ ಕೋರ್ಟ್‌ನಲ್ಲಿ ಹೇಳುತ್ತೇವೆ. ಈಗ ಜಡ್ಜ್ ಮೇಲೆ ನಮಗೆ ಅಸಮಾಧಾನ ಇರುತ್ತದೆ. ``Your Lord can decide what you feel. There is an Appellate Authority'' ಎಂದು ಹೇಳುತ್ತೇವೆ. ಅಂದರೆ, ನೀನು ಕೇಳಿದರೆ ಆಯಿತು, ಕೇಳದಿದ್ದರೂ ಆಯಿತು, ಅಪೀಲ್ ಇದೆ, ನಾನು ಹೋಗುತ್ತೇನೆ ಎಂದು ಅದರ ಅರ್ಥ. ಅದನ್ನು ಗೌರವಪೂರ್ವಕವಾಗಿ ಹೇಗೆ ಹೇಳುತ್ತೀರಿ ಅಂದರೆ There is an Appellate Court ಎಂದು ತೋರಿಸುತ್ತೇವೆ. ನಿಮಗೆ ನಾನು ಏನು ಹೇಳುತ್ತೇನೆಂದರೆ, ಭಾಷೆ ಬಳಸತಕ್ಕಂಥ ಶೈಲಿ ಚಮತ್ಕಾರ ಅದು ಬೇರೆಯೇ ಇರುತ್ತದೆ. ಈಗ Question Hour ಇರುತ್ತದೆ. ನಾವು ಸಣ್ಣ ಸಣ್ಣದನ್ನೆಲ್ಲಾ ದೊಡ್ಡದನ್ನಾಗಿ ಮಾಡಿಕೊಂಡು, ಕುಸ್ತಿ ಅಖಾಡ ಮಾಡಿಕೊಂಡು ಹೋಗುವುದೇ?

ಶ್ರೀ ಕೆ. ಎಸ್. ಈಶ್ವರಪ್ಪ : ನಾನು ನೇರವಾಗಿ ಪ್ರಶ್ನೆ ಕೇಳಿದೆ. ಸ್ಪೀಕರ್‌ರವರನ್ನು ನೀವು ಇಡೀ ಸದನವನ್ನು ತಪ್ಪು ದಾರಿಗೆ ತೆಗೆದುಕೊಂಡು ಹೋಗುತ್ತಿದ್ದೀರಿ ಅನ್ನ ಬಹುದೇ? ನೀವು ಮತ್ತೆ ಇಷ್ಟುದ್ದ ಭಾಷಣ ಮಾಡುತ್ತಿದ್ದೀರಿ.

ಶ್ರೀ ಕೆ. ಆರ್. ರಮೇಶ್‌ಕುಮಾರ್ : ಅವರ ಅಭಿಪ್ರಾಯ ಹಾಗಿದ್ದರೆ, ಇಲ್ಲಿ ಉಳಿದಿರುವುದು ಎರಡು ಮಾರ್ಗಗಳು. ಅವರು ತಾವು ಹೇಳಿದ್ದು ಸರಿಯೆಂದು ಸಮರ್ಥಿಸಿಕೊಳ್ಳಬೇಕು ಇಲ್ಲವೇ, ಅವರು ಸಮರ್ಥಿಸಿಕೊಳ್ಳುವುದಕ್ಕೆ ಆಗಲಿಲ್ಲವೆಂದರೆ ವೃಥಾ ಆಪಾದನೆಯನ್ನು ಅಧ್ಯಕ್ಷರ ಮೇಲೆ, ಕುರ್ಚಿ ಮೇಲೆ ಮಾಡಿದ್ದರೆ, ಮಾನ್ಯ ಅಧ್ಯಕ್ಷರು ಅವರಿಗೆ ಶಿಕ್ಷೆ ಕೊಡಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ : ನಾನು ಕಾನೂನಿನ ಬಗ್ಗೆ ಬರುತ್ತಿಲ್ಲ. ಅದಕ್ಕೆ ನೀವೇನು ಹೇಳುತ್ತೀರಿ? ನಿಮ್ಮ ಉತ್ತರವೇನು?

ಶ್ರೀ ಕೆ. ಆರ್. ರಮೇಶ್‌ಕುಮಾರ್ : ಈಗ ನಾನು ಹೇಳುವ ವಿಧಾನ ಒಂದಾಗುತ್ತದೆ, ಅವರು ಹೇಳುವ ವಿಧಾನ ಒಂದಾಗುತ್ತದೆ.

ಶ್ರೀ ಕೆ. ಎಸ್. ಈಶ್ವರಪ್ಪ : ಈ ಉತ್ತರ ಕೇಳುವುದಕ್ಕೆ ನಾನು ನಿಜಕ್ಕೂ ನಿಮ್ಮನ್ನು ಪ್ರಶ್ನೆ ಕೇಳುತ್ತಿರಲಿಲ್ಲ. ಈ ಉತ್ತರ ನಿಮ್ಮಿಂದ ಬರುತ್ತದೆಂದು ಇದ್ದಿದ್ದರೆ, ನಾನು ಪ್ರಶ್ನೆ ಕೇಳುತ್ತಿರಲಿಲ್ಲ. Sorry, ಬಿಡಿ. ನಾನು ಕೇಳುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ರಮೇಶ್‌ಕುಮಾರ್‌ರವರೇ. ಆ ಸ್ಥಾನದಲ್ಲಿದ್ದಿದ್ದರೆ, ಇಷ್ಟೊತ್ತಿಗೆ ಹೌಸ್ ಮುಂದಕ್ಕೆ ಹೋಗುತ್ತಿತ್ತು. ಅವರು ಪೀಠ ಬಿಟ್ಟು ಎದ್ದುಬಿಡುತ್ತಿದ್ದರು. ಬಹುಶಃ ಅಡ್ಜರ್ನ್ ಕೂಡ ಮಾಡುತ್ತಿರಲಿಲ್ಲ. ಅಷ್ಟು ಬೇಜಾರು ಮಾಡಿಕೊಳ್ಳುತ್ತಿದ್ದರು. ಪರಿಸ್ಥಿತಿಗಳು ಹೇಗಾಗುತ್ತದೆಂದರೆ, ಆ ಪೀಠಕ್ಕೆ ಇರುವಂಥ ಗೌರವವನ್ನು ಹಗುರ ಮಾಡದೆ . .

ಶ್ರೀ ಜೆ.ಟಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್‌ಕುಮಾರ್‌ರವರು ಎಲ್ಲರಿಗೂ ಬಹಳ ಬುದ್ಧಿವಾದ ಹೇಳುವವರು. ಅವರು ಬಾವಿಗೆ ಬಂದಾಗ ಅಧ್ಯಕ್ಷರ ಬಗ್ಗೆ ಏನು ಸಂಭೋದನೆ ಮಾಡಿದರು ಎಂಬುದನ್ನು ಕಡತ ತೆಗೆಸಿ ನೋಡಿ ಸ್ವಾಮಿ. ಬಾವಿಗೆ ಬಂದಾಗ ಅವೊತ್ತು ರಮೇಶ್‌ಕುಮಾರ್‌ರವರು ಏನು ಮಾತನಾಡಿದರು, ಅದರ ಬಗ್ಗೆ ಕಡತ ತೆಗೆದು ನೋಡಿ. ಅಧ್ಯಕ್ಷರಿಗೆ ಯಾವ ಭಾಷೆ ಬಳಸಿದರು? ಅದನ್ನು ತೆಗೆದು ನೋಡಿ. ಅವೊತ್ತು ಯಾವ ಭಾಷೆ ಬಳಸಿದ್ದರು ಎಂದು . . .

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಸರ್, ಹೀಗೇ ಮಾತನಾಡುತ್ತಾ ಹೋದರೆ...

(ಗೊಂದಲ)

ಶ್ರೀ ಹೆಚ್. ಡಿ. ಬಸವರಾಜು : ಸನ್ಮಾನ್ಯ ಅಧ್ಯಕ್ಷರೆ, ನಾವೂ ಈ ಸದನದಲ್ಲಿದ್ದೇವೆ. ಈ ಸದನದಲ್ಲಿ ಮಾನ್ಯ ಅಧ್ಯಕ್ಷರಿಗೆ ಈ ರೀತಿ ಅವಹೇಳನ ಮಾಡಿದಂಥ ರೀತಿ ನೋಡಿದಾಗ ನಿಜಕ್ಕೂ ಬಹಳ ತಲೆತಗ್ಗಿಸತಕ್ಕಂಥಾದ್ದು. ಏಕೆಂದರೆ, ಒಂದು ಬಾರಿ ಅಲ್ಲ, ಎರಡು ಬಾರಿ ಅಲ್ಲ. ಏನಾಗಿದೆ ನಿಮಗೆ? ಬುದ್ಧಿವಾದ ಹೇಳಬೇಕಾದವರಾದ ನೀವು ಏನು ಮಾಡುತ್ತಿದ್ದೀರಿ? ನಮ್ಮಂತಹವರಿಗೆ ನೀವು ಮಾರ್ಗದರ್ಶನ ಮಾಡಬೇಕಾಗಿದೆ. ಆದರೆ, ನೀವು ಮಾರ್ಗದರ್ಶನ ಮಾಡುತ್ತಿಲ್ಲ. ಕೆಟ್ಟ ಪರಿಪಾಠವನ್ನೂ ನಮಗೆ ಕಲಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಇದು ಒಳ್ಳೆಯದಲ್ಲ. ನಾವು ಅಧ್ಯಕ್ಷ ಪೀಠದಲ್ಲಿ ತೆಗೆದುಕೊಂಡಂಥ ನಿರ್ಣಯವನ್ನು ಗೌರವಿಸುವಂಥ ಒಂದು ಕೆಲಸ ಮಾಡೋಣ. ಆ ನಿರ್ಣಯಕ್ಕೆ ಪ್ರತಿಯಾಗಿ ಹೇಗೆ ನಿರ್ಣಯ ತೆಗೆದುಕೊಂಡಿರಿ ಎಂದು ಕೇಳುವಂಥಾದ್ದನ್ನು ಮಾಡುವುದಕ್ಕೆ ಹೋಗಬೇಡಿ. ಇದು ಒಳ್ಳೆಯ ಸಂಪ್ರದಾಯವಲ್ಲ. ಈ ಸಂಪ್ರದಾಯವನ್ನು ಇವೊತ್ತು ಕರ್ನಾಟಕದಲ್ಲಿ, ಏನಾಗುತ್ತಿದೆಯೆಂದು ಜನರು ನೋಡುತ್ತಿದ್ದಾರೆ. ಮಾನ್ಯ ಹಣಕಾಸು ಮಂತ್ರಿಗಳು ವಿವರಣೆ ಕೊಟ್ಟಿದ್ದಾರೆ, ದಯವಿಟ್ಟು ಕಡತ ತರಿಸಿ ನೋಡಿ. ಆದರೆ, ಅವರ ವಿವರಣೆಯನ್ನು ವ್ಯವಧಾನದಿಂದ ಕೇಳುವಂಥ ಪರಿಸ್ಥಿತಿಯನ್ನು ನಾವು ನಿರ್ಮಾಣ ಮಾಡಲಿಲ್ಲ. ಮತ್ತೆ ಅಧ್ಯಕ್ಷರು ಏನು ಮಾಡಬೇಕಾಗುತ್ತದೆ? ಮತಕ್ಕೆ ಹಾಕಲೇಬೇಕಾಗುತ್ತದೆ. ಕಡತ ತೆಗೆಸಿ ನೋಡಿ. ಕಡತ ತೆಗೆಸಿ ನೋಡಿದಾಗ ನಿಮಗೆ ಯಾವ ರೀತಿ ಸಮಾಧಾನ ಮಾಡುವುದು? ಅವರು

ಹೇಳಿದಂಥ ವಿವರಣೆ ನಿಮಗೆ ಅರ್ಥವಾಗಲಿಲ್ಲವೆಂದರೆ, ಹಣಕಾಸು ಮಂತ್ರಿಗಳು ಏನು ಮಾಡುವುದಕ್ಕಾಗುತ್ತದೆ? ನೀವು ಕಡತ ತೆಗೆಸಿ ನೋಡಿ ಸ್ವಾಮಿ. ಅದರಲ್ಲಿ ಪ್ರತಿಯೊಂದಕ್ಕೂ ವಿವರಣೆ ಕೊಟ್ಟಿದ್ದಾರೆ. ಆ ವಿವರಣೆ ನಿಮಗೆ ಮನವರಿಕೆ ಆಗಲಿಲ್ಲವೆಂದರೆ ಎಷ್ಟು ಬಾರಿ ಅವರು ಹೇಳುವುದಕ್ಕೆ ಸಾಧ್ಯವಾಗುತ್ತದೆ? ಮತ್ತೆ ಅದು Upper Houseಗೆ ಹೋಗಬೇಕಾಗಿದೆ, ಅದು ಹಣಕಾಸಿನ ವಿಚಾರ. ಆದ್ದರಿಂದ, ಮತದಾನಕ್ಕೆ ಹಾಕುವಂಥ ನಿರ್ಣಯವನ್ನು ಮಾನ್ಯ ಅಧ್ಯಕ್ಷರು ತೆಗೆದುಕೊಂಡರು. ಮಾನ್ಯ ಅಧ್ಯಕ್ಷರು ತೆಗೆದುಕೊಂಡ ನಿರ್ಣಯವನ್ನು ಮತ್ತೆ ನೀವೇಕೆ ಪ್ರಶ್ನೆ ಮಾಡುತ್ತಿದ್ದೀರಿ? ದಾರಿಗೆಳೆಯುತ್ತಿದ್ದೀರೆಂದು ಈ ಮಾತನ್ನು ಸದನದಲ್ಲಿ ಏಕೆ ಹೇಳುತ್ತಿದ್ದೀರಿ? ಇದು ಸಂಪ್ರದಾಯಕ್ಕೆ ಶೋಭೆ ತರುವಂಥಾದ್ದಲ್ಲ. ದಯವಿಟ್ಟು ಸರಿಯಾದ ವ್ಯವಸ್ಥಿತ ರೀತಿಯಲ್ಲಿ ನಡೆಯುವಂತೆ ಮಾರ್ಗದರ್ಶನ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಡಾ: ಕೆ. ಅನ್ನದಾನಿ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್ ಆಗಿರಬಹುದು, ಶ್ರೀರಾಮರೆಡ್ಡಿ ಯವರಾಗಿರಬಹುದು, ಮಾಧುಸ್ವಾಮಿಯಾಗಿರಬಹುದು, ಅವರ ಬುದ್ಧಿವಂತಿಕೆಯನ್ನು ನಾವೆಲ್ಲರೂ ಕೂಡ ಹೊಸದಾಗಿ ಬಂದಿರುವವರು ನಿಜವಾಗಿಯೂ ಮೆಚ್ಚುತ್ತೇವೆ. ಮೆಚ್ಚಿ ನಾವೇನಾದರೂ ಅವರಿಂದ ಪಾಠ ಕಲಿಯಬಹುದೇನೋ ಎನ್ನುವುದನ್ನು ನಾವು ನಿರೀಕ್ಷೇ ಮಾಡುತ್ತಿರುತ್ತೇವೆ. ಆದರೆ, ಇವರು ಬಳಸತಕ್ಕಂಥ ಪದ ಹೇಗಿದೆಯೆಂದರೆ, ಹೊಸದಾಗಿ ಬಂದಿದ್ದೇವಲ್ಲಾ, ನಾವು ಬಹಳ ಚೆನ್ನಾಗಿ ಒಳ್ಳೆಯ ಕನ್ನಡದ ಪದಗಳನ್ನು ಬಳಸಿ ಮಾತನಾಡತಕ್ಕಂಥ ಸೌಜನ್ಯತನವನ್ನು ನಾವು ಬಹಳ ಚೆನ್ನಾಗಿ ಒಳ್ಳೆಯ ಕನ್ನಡದ ಪದಗಳನ್ನು ಬಳಸಿ ಮಾತನಾಡತಕ್ಕಂಥ ಸೌಜನ್ಯತನವನ್ನು ನಾವು ಕಲಿತುಕೊಂಡಿದ್ದೇವೆ. ಆದರೆ, ಇವರಿಂದ ನಾವೇನಾದರೂ ತಿಳಿದುಕೊಂಡು ಕಲಿತುಕೊಳ್ಳುತ್ತೇವೆಂದು ಏನಾದರೂ ಇಲ್ಲಿ ಬಂದಿದ್ದಾರೆ, ನಿಜವಾಗಿಯೂ ನಾವೆಲ್ಲರೂ ಮೂರ್ಖರೆಂದು ನಾನು ಭಾವಿಸಿಕೊಂಡಿದ್ದೇನೆ. ಇವೊತ್ತು ಹೊಸ ಸರ್ಕಾರ, ಅವರಿಗೆ ಅನುಭವ ಇಲ್ಲ. ಮತ್ತೆ ಇವೊತ್ತು ನಾವು ಬಿಜೆಪಿ ಜೊತೆ ಸೇರಿ ಸರ್ಕಾರ ರಚನೆ ಮಾಡಿದ್ದೇವೆ. ಅವರಿಗೆ ಹಿಂದಿನಿಂದಲೂ ಕೂಡ ಅಧಿಕಾರ ಸಿಕ್ಕಿದೆ. ಆದರೆ ಇವರಿಗೆ ಆಡಳಿತ ಮಾಡಿದ ಅನುಭವವಿಲ್ಲ. ಆದುದರಿಂದ, ಇವರನ್ನು ಹೇಗಾದರೂ ಮಾಡಿ ಇಕ್ಕಟ್ಟಿಗೆ ಸಿಲುಕಿಸಬೇಕು. ಏನಾದರೂ ಮಾಡಿ ಈ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕೆಂಬ ಪ್ರಯತ್ನವನ್ನು ಇವರು ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ತಾವು ಒಂದು ಕೆಲಸ ಮಾಡಿ. ಈಗ ನಾನು ಹೊಸ ಸದಸ್ಯನಾಗಿದ್ದು, ಯಾವುದಾದರೊಂದು ವಿಚಾರವನ್ನು ಮಾನ್ಯ ಶ್ರೀರಾಮರೆಡ್ಡಿಯವರಿಗೂ ನನಗೂ ಹಂಚಿಕೆ ಮಾಡಿ. ನಾವಿಬ್ಬರೂ ಇಲ್ಲಿ ವಿಧಾನಸೌಧದೊಳಗೆ ಚರ್ಚೆ ಮಾಡುತ್ತೇವೆ. ಆಗ ಯಾರು ಬುದ್ಧಿವಂತರು, ಯಾರು ಚೆನ್ನಾಗಿ ಚರ್ಚೆ ಮಾಡುತ್ತಾರೆ ಎಂಬುದಕ್ಕೆ ಅವಕಾಶ ಕೊಟ್ಟು ನೋಡಿ. ಆಗ ಮಾತು-ಕತೆ ನಡೆ-ನುಡಿ ಏನೆಂದು ಸ್ವಲ್ಪ ಅರ್ಥಮಾಡಿಕೊಂಡು ನಮಗೆ ನೀವು ಅವಕಾಶ ಮಾಡಿಕೊಡಿ. ಹಿರಿಯ ಸದಸ್ಯರಿಂದ ನಾವೇನಾದರೂ ತಿಳಿದುಕೊಳ್ಳೋಣವೆಂದು ನಾವು ಸುಮ್ಮನೆ ಕುಳಿತಿರುತ್ತೇವೆ. ಆದರೆ, ಇವರಿಗೆ ಏನೂ ಗೊತ್ತಿಲ್ಲವೇನೋ, ಈ ಪ್ರಪಂಚದಲ್ಲಿ ನಮಗೇ ಎಲ್ಲಾ ಗೊತ್ತಿರುವುದು, ನಾವೆಲ್ಲಾ International intellectuals ಎನ್ನುವ ಭಾವನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುತ್ತಿರುತ್ತಾರೆ. ನಾವು ಹೊಸಬರು, ಇವರ ಹತ್ತಿರ ಏನಾದರೂ ಕಲಿಯೋಣವೆಂದು ಪ್ರಯತ್ನ ಮಾಡಿದರೆ, ಎಂತಹ ಪದ ಬಳಸುತ್ತಾರೆ, ನಾನು ಕನ್ನಡದ ವಿದ್ಯಾರ್ಥಿ. ಅವೊತ್ತು ಮಾನ್ಯ ಮಹಿಮಾ ಪಟೇಲ್‌ರವರು ಒಂದು ಮಾತು ಹೇಳಿದರು. ಇವೊತ್ತು ನಮ್ಮ ಕನ್ನಡ

ಸಾಹಿತ್ಯದಲ್ಲಿ ಎರಡು ವರ್ಗವನ್ನು ನಾವು ನೋಡುತ್ತೇವೆ. ಒಂದು ಜನಪದ ಸಾಹಿತ್ಯವಾದರೆ, ಮತ್ತೊಂದು ಶಿಷ್ಟ ಸಾಹಿತ್ಯ ಜನಪದ ಸಾಹಿತ್ಯವೆಂದರೆ, ಹಳ್ಳಿಯಲ್ಲಿ ಬೆಳಿಗ್ಗೆ ಎದ್ದು ಜನಪದ ಶೈಲಿಯಲ್ಲಿ ಮಾತನಾಡುತ್ತಾರೆ. ಶಿಷ್ಟ ಸಾಹಿತ್ಯ ಬೇರೆ ಇರುತ್ತದೆ. ಅವರು ಜನಪದ ಶೈಲಿಯಲ್ಲಿ ಮಾತನಾಡಿದರೆ, ಬಳಸಿದ ಪದ ಸರಿ ಇಲ್ಲ, ಅವರು ಮಾತನಾಡಿದ ವಾಕ್ಯ ಸರಿಯಿಲ್ಲವೆಂದು ಅವರಿಗೆ ಕೈ ತೋರಿಸಿ ನಮ್ಮ ಹಿರಿಯ ನಾಯಕರು ಹೇಳುತ್ತಾರೆ. ಆದರೆ, ಇವೊತ್ತು ಅವರು ಮಾತನಾಡಿದ್ದು ಏನು? ಪದ ಚೆನ್ನಾಗಿದೆ, unparliamentary words ಅಲ್ಲ, ಅದು parliamentary words ಎಂದು ಮಾತನಾಡುತ್ತಾರೆ. ಇದು ಯಾವ Parliamentary words ಎಂದು ಸ್ವಲ್ಪ ಹೇಳಿ. ನಮ್ಮ ಹಿರಿಯ ನಾಯಕರು ಇಂತಹ ಪದಗಳನ್ನು ಉಪಯೋಗಿಸುವುದೇ? ದಯಮಾಡಿ ನಮಗೂ ಕೂಡ ನೀವು ಅವಕಾಶ ಮಾಡಿಕೊಡಬೇಕು. ಹೆಚ್ಚಿನ ಅವಕಾಶ ಮಾಡಿಕೊಟ್ಟರೆ, ನಾವೂ ಕೂಡ ವಿಚಾರವನ್ನೂ ಮಂಡಿಸುತ್ತೇವೆ. ವಿಚಾರ ಮಂಡಿಸಿದಾಗ ನಾವು ಬುದ್ಧಿವಂತರು ಅಲ್ಲವೇ ಅಥವಾ ಇವರು ದಡ್ಡರೇ? ಎಂದು ನಿಮಗೆ ಅರ್ಥವಾಗುತ್ತದೆ. ಬರೀ ಐದು ಜನರಿಗೇ ಯಾವಾಗಲೂ ಅವಕಾಶ ಕೊಡುತ್ತೀರಿ. ಅವರೇ ಮಾತನಾಡುವುದು, ಇನ್ಯಾರಿಗೂ ಅವಕಾಶ ಸಿಗುವುದಿಲ್ಲ. ಈ ನನ್ನ ಮಕ್ಕಳೆಲ್ಲಾ ಬುದ್ಧಿವಂತರಲ್ಲವೇನೋ ಎನ್ನುವ ರೀತಿಯಲ್ಲಿ ಇವರು ಅರ್ಥ ಮಾಡಿಕೊಂಡಿದ್ದಾರೆ. ದಯಮಾಡಿ ಇನ್ನು ಮೇಲೆ ಈ ತಾರತಮ್ಯ ಬೇಡ. ತಾವು ನಮಗೂ ಕೂಡ ಅವಕಾಶ ಮಾಡಿಕೊಡಬೇಕು. ನಮಗೂ ಇಷ್ಟು ವೇಳೆ ಎಂದು ನಿಗದಿಪಡಿಸಿ, ನಾವೂ ಚರ್ಚೆ ಮಾಡುತ್ತೇವೆ, ಚರ್ಚೆಯಲ್ಲಿ ಭಾಗವಹಿಸುತ್ತೇವೆ. ಆದರೆ, ಅವರು ವಿರೋಧ ಪಕ್ಷದಲ್ಲಿದ್ದಾರೆಂದು ನಾವು ಸುಮ್ಮನೆ ಕುಳಿತಿರುತ್ತೇವೆ. ಆದರೆ, ಅವರು ಬಳಸುವ ಪದ, ಅವರು ನಡೆದುಕೊಳ್ಳುವ ರೀತಿ, ಅವರು ಇಲ್ಲಿ ಮಾತನಾಡತಕ್ಕಂಥ ರೀತಿ, ಎಲ್ಲವೂ ಕೂಡ ಹೇಗಿದೆಯೆಂದರೆ, ಅಧ್ಯಕ್ಷರನ್ನು ಯಾವುದೇ ರೀತಿಯಲ್ಲಿ ನಾವು ಪ್ರಶ್ನೆ ಮಾಡಬಾರದೆಂದು ನಿಯಮಾವಳಿಯಲ್ಲಿ ಇರುತ್ತದೆ. ಆದರೆ ಅವರು ಯಾವ ರೀತಿ ಪ್ರಶ್ನಿಸುತ್ತಾರೆಂದರೆ, ಇವೊತ್ತು ಎಲ್ಲಾ ಬಿಲ್‌ಗಳನ್ನೂ ಕೂಡ ಸಂಪೂರ್ಣ ಅರೆದು ಚೆನ್ನಾಗಿ ಅರ್ಥಮಾಡಿಕೊಂಡಿದ್ದೇವೆ. ಈ ದೇಶದ ಸಂವಿಧಾನದಿಂದ ಹಿಡಿದು ಈ ದೇಶದ ರಾಜ್ಯಾಂಗ ಎಲ್ಲವನ್ನೂ ಕೂಡ ನಾವು ಅರ್ಥ ಮಾಡಿಕೊಂಡಿದ್ದೇವೆ. ನಮಗೆ ಗೊತ್ತಿರುವುದೇನೂ ಇಲ್ಲ, ಎಲ್ಲವೂ ಕೂಡ ಗೊತ್ತು ಎಂದು ಮಾತನಾಡುತ್ತಾರೆ. ದಯಮಾಡಿ ತಾವು ಇದಕ್ಕೆಲ್ಲಾ ಅವಕಾಶ ಮಾಡಿಕೊಡಬೇಡಿ. ಇಂತಹ ಪದಗಳನ್ನು ಬಳಸುವವರ ಮೇಲೆ ನೀವು ಏನು ಕ್ರಮ ತೆಗೆದುಕೊಳ್ಳಬೇಕೋ, ಈ ಸದನದಲ್ಲಿ ದಯಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೈಮುಗಿದು ಪ್ರಾರ್ಥಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ. ಮಾನ್ಯ ಎಸ್.ಎಸ್. ಪಾಟೀಲ್‌ರವರು ಊರಿಗೆ ಹೋಗಬೇಕೆಂತೆ. ಆದ್ದರಿಂದ ಅವರು ಅನುಮತಿ ಕೋರಿದ್ದಾರೆ. ಮೊದಲು ಅವರು ಪ್ರಶ್ನೆ ಕೇಳಲಿ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಪ್ರಶ್ನೆಯ ಸಂಖ್ಯೆ 28ನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಕೇಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಸಚಿವರು ನಮ್ಮ

. . . .

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ತಾವು ಸಭಾಧ್ಯಕ್ಷರು. ಕಾನೂನನ್ನು, ನಿಯಮಗಳನ್ನು ಅವರು ಕೇಳಿದ್ದಾರೆ. ಇಲ್ಲಿ ಬಂದಿರುವ ಪ್ರಶ್ನೆ ನನ್ನದು ಮತ್ತು ಶ್ರೀರಾಮರೆಡ್ಡಿಯವರದ್ದು. ತಾವು ನಮಗೆ ಕರೆಯುತ್ತೀರಾ ಎಂದು ನಾವು ಕುಳಿತಿದ್ದೆವು. ತಮಗೆ ಏನಾಗಿದೆಯೋ ನನಗೆ ಗೊತ್ತಿಲ್ಲ. ಅಧ್ಯಕ್ಷರನ್ನು ಪ್ರಶ್ನೆ ಮಾಡಲೇಬಾರದು ಎಂದು ಯಾವ ನಿಯಮವೂ ಇಲ್ಲ. ಮಾನ್ಯ ಅಧ್ಯಕ್ಷರ ರೂಲಿಂಗ್‌ನ್ನು ನಾವು question ಮಾಡಿಲ್ಲ. ನಾವು ನಮ್ಮ ಹಕ್ಕಿಗೆ ಏನು ಚ್ಯುತಿಯಾಯಿತು.

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ : ನಾವೇನೂ ಅಪರಾಧ ಮಾಡಿಲ್ಲ ...

ಅಧ್ಯಕ್ಷರು : ನಾನು ಈಗ ಅವರನ್ನು ಕರೆದಿದ್ದೇನೆ. ಏನೇ ಹೇಳುವುದಿದ್ದರೆ ಆಮೇಲೆ ಹೇಳಿ. ಮಧ್ಯದಲ್ಲಿ ಮತ್ತೆ ಎತ್ತಬೇಡಿ. ದಯಮಾಡಿ ಕುಳಿತುಕೊಳ್ಳಿ. ಈಗ ನಾನು ಪ್ರಶ್ನೋತ್ತರ ತೆಗೆದುಕೊಂಡಿದ್ದೇನೆ, ನಾನು ಮಾನ್ಯ ಎಸ್.ಎಸ್. ಪಾಟೀಲರನ್ನು ಕರೆದಿದ್ದೇನೆ. ನಾನು ಅವರನ್ನು ಕರೆದಾದ ಮೇಲೆ ನೀವು ಈ ರೀತಿ ಎದ್ದುನಿಂತು ಕೊಂಡು ಈ ರೀತಿ ಮಾಡುವುದು ಸರಿಯಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ನಮ್ಮನ್ನು ಕರೆಯಬೇಕಾಗಿತ್ತು.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಆಮೇಲೆ ಎತ್ತುವಿರಂತೆ. ಮಾನ್ಯ ಪಾಟೀಲರೆ, ಹೇಳಿ.

ಅಧ್ಯಕ್ಷರು : ಆಯಿತು. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ನೀವು ಶಾಸನ ಸಭೆಯಲ್ಲಿ ಏನೆಂದು ತಿಳಿದುಕೊಂಡಿದ್ದೀರಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವೇ ನಡೆಸಿಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ತಮಗೆ ನಮಸ್ಕಾರ ಮಾಡಿ ನಾವು ಹೋಗುತ್ತಿದ್ದೇವೆ.

(ಗೊಂದಲ)

(ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಜಿ.ವಿ. ಶ್ರೀರಾಮರೆಡ್ಡಿ, ಶ್ರೀ ವಾಟಾಳ್ ನಾಗರಾಜ್‌ರವರು ಸಭೆಯಿಂದ ನಿರ್ಗಮಿಸಿದರು)

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅಧ್ಯಕ್ಷರೆ, ಆಪಾದನೆಯನ್ನು ಮಾಡಿದಾಗ ಉತ್ತರವನ್ನು ಹೇಳಲು ಅವಕಾಶ ಕೊಡಬೇಕಲ್ಲವೆ?

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾವು ಯಾವಾಗಲೂ ಚರ್ಚೆಯನ್ನು ಮಾಡಿದಾಗ ಗಲಾಟೆಯನ್ನು ಮಾಡುವುದಿಲ್ಲ. ಆದರೆ ನಮಗೆ ತಮ್ಮ ತೀರ್ಮಾನ ಒಂದೇ ತರಹ ಇರಬೇಕು.**XX**

ಶ್ರೀ ಬಿ.ಎಸ್. ಹೊರಟ್ಟಿ : ತಾವು ಆ ರೀತಿ ಹೇಳಬಾರದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಹೊರಟ್ಟಿಯವರೆ, ದಯವಿಟ್ಟು ನನಗೆ ಮಾತನಾಡಲು ಬಿಡಿ.

ಶ್ರೀ ದಿನೇಶ್ ಗುಂಡೂರಾವ್ : ಅವರು ಮಾತನಾಡಲು ಬಿಡಿ ಮಾನ್ಯ ಹೊರಟ್ಟಿ ಸಾಹೇಬರೇ, ಅವರು ಮುಗಿಸಲಿ.

XX ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾನು ಮಾತನಾಡಿದ ಮೇಲೆ ನೀವು ಹೇಳಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಹೆಗ್ಡೆಯವರೆ, ನಾನು ಅವರು ಹೇಳಿದರು, ಇವರು ಹೇಳಿದರು ಎಂದಲ್ಲ, ಈಗ ಪ್ರಶ್ನೋತ್ತರ ಕರೆದಿದ್ದೇನೆ. ಮತ್ತೇಕೆ ಈ ರೀತಿ ಮಾಡುತ್ತಿದ್ದೀರಿ?

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾನು ಮಾತನಾಡುವುದು ಬೇಡ ಎಂದರೆ ನಾನು ಮಾತನಾಡುವುದಿಲ್ಲ. ಅಷ್ಟು ಮಾತನಾಡಿದ ಮೇಲೆ ಅದಕ್ಕೆ ಪ್ರತ್ಯುತ್ತರವನ್ನಾದರೂ ಕೇಳಬೇಕಿತ್ತಲ್ಲಾ?

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾನು ಮಾತನಾಡುವುದು ಬೇಡ ಎಂದರೆ ನಾನು ಮಾತನಾಡುವುದಿಲ್ಲ. **XX** ಅಷ್ಟು ಮಾತನಾಡಿದ ಮೇಲೆ ಅದಕ್ಕೆ ಪ್ರತ್ಯುತ್ತರವನ್ನಾದರೂ ಕೇಳಬೇಕಿತ್ತಲ್ಲಾ?

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ತಾವು ತಡವಾಗಿ ಬಂದಿರಿ. **XX** ಇಂಥ ವಿಚಾರಗಳು ಆಗುತ್ತಿರುವ ಸಂದರ್ಭದಲ್ಲಿ, ಇವರುಗಳು ಏನು ಹೇಳುತ್ತಾರೋ ಅದೇ ಸರಿ. ಇವರು ಹೇಳಿದ ಪ್ರಕಾರ ನಡೆದರೆ, ಆ ಕಡೆ ತಕ್ಕಡಿ ವಾಲಿದರೆ ಮಾತ್ರ ನ್ಯಾಯ, ಇವರು ಇಬ್ಬರು ಮೂರು ಜನ ಏನು ತೀರ್ಮಾನ ಮಾಡುತ್ತಾರೆ ಅದೇ ಕರೆಕ್ಟ್ ಉಳಿದ 221 ಜನ ಏನು ಮಾಡುತ್ತಾರೆ ಅದು ಲೆಕ್ಕಕ್ಕೆ ಇಲ್ಲ. ಹೀಗಾಗಿ ಇವರಿಗೆ ಮಾತನಾಡಲು ಅವಕಾಶ ಇಲ್ಲವೆ? ಇದೆ. ಸನ್ಮಾನ್ಯ ಅಧ್ಯಕ್ಷರು ಪ್ರಶ್ನೋತ್ತರಕ್ಕೆ ಕರೆದರು. ಆ ರೀತಿ ಕರೆಯುತ್ತಿದ್ದಂತೆ, ಆಮೇಲೆ ಸಹ ಇವರಿಗೆ ಕೇಳಲು ಅವಕಾಶ ಇತ್ತು ತಾನೆ?

ಶ್ರೀ ಕೆ. ಆರ್. ರಮೇಶ್‌ಕುಮಾರ್ : ದಯಮಾಡಿ ಕೇಳಿ. ಮಾನ್ಯ ಅನ್ನದಾನಿಯವರು ಉಳಿದ ಎಲ್ಲಾ ಸ್ನೇಹಿತರು ಮಾತನಾಡಿದ ಮೇಲೆ ಸೌಜನ್ಯಕ್ಕಾದರೂ ಮಾನ್ಯ ಅಧ್ಯಕ್ಷರು ಅವರನ್ನು ಕರೆಯಬೇಕಾಗಿತ್ತು. ಅವರು ಅಕ್ಯುಸ್ ಮಾಡಿದವರು. ನೀವು ಏನು ಹೇಳುತ್ತೀರಾ ಎಂದು ಕರೆಯಬೇಕಾಗಿತ್ತು. ಅವರು ಒಂದು ತರಹ ಪ್ರೊಟೆಸ್ಟ್ ಮಾಡಿಕೊಂಡು ಹಾಗೆ ಆಯಿತು, ನಾವು ಸಹಕರಿಸುತ್ತೇವೆ, ಅವರು ಏನು ಹೇಳುತ್ತಾರೋ ಹೇಳಲಿ ಎಂದು ಅಷ್ಟೊಂದು ಗಂಭೀರವಾಗಿ ಅವರು ಕುಳಿತಿದ್ದಾಗ, ಅದೆಲ್ಲಾ ರೆಕಾರ್ಡ್‌ಗೆ ಹೋಗಿದೆ. ಅವರಿಗೆ ಅವಕಾಶವನ್ನೇ ಕೊಡದೆ . . .

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಅವರು ಹೇಳತಕ್ಕದನ್ನು ಮಾತ್ರ ತಾವು ಹೇಳುತ್ತಿದ್ದೀರಿ.

ಅಧ್ಯಕ್ಷರು : ನೀವು ಹೇಳಿದ್ದೇ ಸರಿಯೆಂದು ಅಲ್ಲ, ಈಗ ಮುಕ್ತಾಯ ಮಾಡೋಣ. ಪ್ರಶ್ನೋತ್ತರ ತೆಗೆದುಕೊಳ್ಳೋಣವೆಂದು ಹೇಳೀ ನಾನು ಈಗ ಪ್ರಶ್ನೋತ್ತರ ಅಂದ ಮೇಲೆ ಅವರು ಮತ್ತೆ ಎತ್ತಿದರೆ, ಹೇಗೆ? ಇಲ್ಲಿ ಏನಾಗಿದೆ ಎಂದರೆ, ಇಲ್ಲಿ ಕೆಲವು ಜನ ನೀವು ಹೇಳಿದ್ದೇ ಸತ್ಯ ನೀವು ಹೇಳಿದ ರೀತಿಯಲ್ಲೇ ನಡೆಯಬೇಕು ಎನ್ನುತ್ತಾರೆ. ಏನಿದು? ಬಾಯಿಗೆ ಬಂದಂತೆ ಮಾತನಾಡತಕ್ಕದ್ದು. ಆ ಬಾಯಿಯ ಪದಗಳು, ಏನು? ನೀವು ಬಹಳ ಸೌಮ್ಯವಾಗಿ ಹೇಳಿದಿರಿ. ಅವರು ಏನೇನು ಭಾಷೆಯಲ್ಲಿ ಮಾತನಾಡುತ್ತಾರೆ? ಎಲ್ಲದಕ್ಕೂ ಒಂದು ಮಿತಿ ಇದೆ. ಯಾವ್ಯಾವುದೋ ಕಾರಣಕ್ಕೆ ನಿಮಗೆ ಆಕ್ರೋಶ ಇರಬಹುದು. ಆ ಆಕ್ರೋಶವನ್ನು ಈ ರೀತಿ ಏಕೆ ಪ್ರದರ್ಶನ ಮಾಡುತ್ತೀರಿ?

XX ಈ ಪದಗಳನ್ನು ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಅನೇಕ ದಿವಸ ನಡೆದಿದೆ. ನೀವು ಬಳಸಿರತಕ್ಕ ಭಾಷೆ ಏನಿದು? ನೀವೇನು ಮಾತನಾಡುತ್ತಿದ್ದೀರಿ? ಎಲ್ಲರೂ ಧರ್ಮರಾಯನ ಮೊಮ್ಮಕ್ಕಳು ಇವರು. ಆ ರೀತಿ ಮಾತನಾಡತಕ್ಕದ್ದು ಸರಿಯಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಪಾಟೀಲರೇ, ತಾವು ಮಾತನಾಡಿ. ಎಲ್ಲದಕ್ಕೂ ಒಂದು ಮಿತಿ ಬೇಕು.

(ಗೊಂದಲ)

ಶ್ರೀ ಕೆ. ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ತಮ್ಮ ಅಭಿಪ್ರಾಯಗಳಿಗೆ ನಾವು ತಲೆಬಾಗುತ್ತಿದ್ದೇವೆ. ಅವರೆಲ್ಲಾ ಮೇಜುಕುಟ್ಟಿ ತಮ್ಮನ್ನು ಸಮರ್ಥಿಸಿದ್ದಾರೆ. ತಾವು ಮತ್ತು ಅವರು ಏಕಪಕ್ಷೀಯವಾಗಿ ಈ ಸಭೆಯನ್ನು ನಡೆಸಿಕೊಂಡು ಧಾರಾಳವಾಗಿ ಹೋಗಿ.

(ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಕೆ. ಎಸ್. ಈಶ್ವರಪ್ಪ : ಈ ಸರ್ಕಾರ ಒಳ್ಳೆಯ ಬಜೆಟ್ ಅನ್ನು ಕೊಟ್ಟಿದ್ದೇ ನಿಮಗೆ ಸಮಾಧಾನ ಇಲ್ಲ. ಬಜೆಟ್‌ಗೆ ಸರಿಯಾದ ಉತ್ತರ ಬಂದಿತು, ಇದರಿಂದ ಇವರಿಗೆ ಅಸಮಾಧಾನವಾಯಿತು.

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ಜೀವಿಜಯರವರ ಪರವಾಗಿ ಮಾನ್ಯ ಬೋಪಯ್ಯನವರು ಪ್ರಶ್ನೆ ಕೇಳಬಹುದು.

ಶ್ರೀ ಬಸವರಾಜ ಎಸ್. ಹೊರಟ್ಟಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ದಯಮಾಡಿ ನನ್ನದೊಂದು ವಿನಂತಿ ಇದೆ. ಇವತ್ತು ನನ್ನ ಸ್ನೇಹಿತರೆಲ್ಲಾ ಹೋಗಿದ್ದಾರೆ. ನಾನು ಕಳೆದ ಅನೇಕ ದಿವಸಗಳಿಂದ ಈ ಸದನದಲ್ಲಿ ನೋಡುತ್ತಿದ್ದೇನೆ. ಅಧ್ಯಕ್ಷರಿಗೆ ಧಿಕ್ಕಾರ ಎನ್ನುವುದು, ಇವೆಲ್ಲವನ್ನೂ ದಯಮಾಡಿ ಕಡತದಿಂದ ತೆಗೆಸಿ. ಈ ರೀತಿ ಮಾತನಾಡಿದರೆ ಹೇಗೆ? ಮಾನ್ಯ ಯಡಿಯೂರಪ್ಪನವರು ಉತ್ತರವನ್ನು ಕೊಡುವಾಗ ಅದನ್ನು ಕೇಳುವಷ್ಟು ಸೌಜನ್ಯ ಇಲ್ಲದೆ, ಎಲ್ಲರೂ ಗಲಾಟೆ ಎಬ್ಬಿಸಿದರೆ ಅವರು ಯಾವ ರೀತಿಯಾಗಿ ಉತ್ತರ ಕೊಡಬೇಕು? ಅವರು ಎಷ್ಟು ಸಾಧ್ಯವಿದೆಯೋ ಅಷ್ಟು ಉತ್ತರವನ್ನು ಕೊಟ್ಟಿದ್ದಾರೆ. ತಾವು ಹೇಳಿದಂತೆ ಎಲ್ಲರೂ ಪರಿಣಿತರು ಇರುವುದಿಲ್ಲ. ಆಯಿತು, suppose ಹೆಚ್ಚು ಕಡಿಮೆ ಆಯಿತು ಎಂದರೆ, ಅದನ್ನು ಕೇಳಲು ಒಬ್ಬರಲ್ಲ, ಎಲ್ಲರೂ ಎದ್ದು ನಿಂತರೆ ಹೇಗೆ? ಯಾವ ರೀತಿಯಿಂದ ಬಜೆಟ್ ಮೇಲೆ ಮತ್ತು ಬಿಲ್ ಮೇಲೆ ಚರ್ಚೆಗಳಾಗಬೇಕೋ ಅದು ನಡೆಯುತ್ತಿಲ್ಲ. ಒಮ್ಮಿಂದೊಮ್ಮೆಗೇ ಗಲಾಟೆ ಮಾಡಿ, ಈ ಸದನದಲ್ಲಿ ಏನೋ ನಡೆಯುತ್ತಿದೆ ಎಂದು ಹೊರಗಿನ ಜಗತ್ತಿಗೆ ಗೊತ್ತು ಮಾಡಬೇಕು ಎನ್ನುವಂತಹ ಒಂದೇ ಒಂದು ಉದ್ದೇಶದಿಂದ ಅವರು ಈ ರೀತಿ ಮಾಡಿದ್ದಾರೆ. ಈ ರೀತಿಯಾದರೆ ಸದನವನ್ನು ಹೇಗೆ ನಡೆಸಲಿಕ್ಕೆ ಆಗುತ್ತದೆ? ಇವತ್ತು ನಾನು ಹೇಳುತ್ತೇನೆ, ಸರಿಯೋ ತಪ್ಪೋ? ತಮ್ಮ ತೀರ್ಮಾನಕ್ಕೆ ನಾವು ತಲೆ ಬಾಗುತ್ತೇವೆ. ಅದನ್ನು ನೀವು ಹೇಗೆ ಮಾಡಿದಿರಿ? ಏನು ಮಾಡಿದಿರಿ ಎಂದು question ಮಾಡುವುದು ಸರಿಯಾದುದಲ್ಲ. ಇದನ್ನು ಮರು ಪರಿಶೀಲನೆ ಮಾಡಿ ಎಂದು ಬೇಕಾದರೆ ಕೇಳಬಹುದು. ನಾನೂ ನೋಡಿದ್ದೇನೆ, ನಾನು ಮೇಲ್ಮನೆಯಲ್ಲಿ ಕಳೆದ 25 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಿಮಗೆ ಅವರು ಆ ರೀತಿ 'ನಾಲಾಯಕ್ ಅಧ್ಯಕ್ಷರಿಗೆ

ಧಿಕ್ಕಾರ್ ಎಂದು ಹೇಳುವುದು ನಾನಂತೂ ಪ್ರಪಂಚದಲ್ಲಿ ಎಲ್ಲಿಯೂ ನೋಡಿಲ್ಲ. ಈ ರೀತಿ ಆಗಬಾರದು. ಈ ಸದನದಲ್ಲಿ ಗೌರವ, ಘನತೆಗಳನ್ನು ಕಾಯ್ದುಕೊಳ್ಳಬೇಕಾಗುತ್ತದೆ. ನಾವೆಲ್ಲರೂ ಪರಿಣಿತರು ಇರುವುದಿಲ್ಲ ಅಥವಾ ಅಲ್ಲಿ ಕುಳಿತಂತಹವರು ಪರಿಣಿತರಿರುವುದಿಲ್ಲ. ಎಷ್ಟೋ ಸಲ ಸುಪ್ರೀಂ ಕೋರ್ಟ್‌ನಲ್ಲಿ ಜಡ್ಜ್‌ಮೆಂಟ್ ಕೊಟ್ಟಿದ್ದೂ ಕೂಡ ತಪ್ಪಾಗಿದೆ. ನಮ್ಮಲ್ಲೇ ಚಿಕ್ಕಮಗಳೂರಿನ ಶಂಕರ್ ಎನ್ನುವವ 2–3 ವರ್ಷಗಳ ಕಾಲ ಜೈಲಿನಲ್ಲಿ ಇದ್ದ, ಅವನನ್ನು ನಂತರ ನಿರ್ದೋಷಿ ಎಂದು ಬಿಟ್ಟರು. ಎಷ್ಟೋ ಸಾರಿ ತಪ್ಪಾಗುತ್ತವೆ. ಆದರೆ ಪ್ರಶ್ನೆಯನ್ನು ಮಾಡುವಾಗ, ಮರು ಪರಿಶೀಲನೆ ಮಾಡಿ ಎಂದು ಕೇಳಬೇಕಾಗಿತ್ತು. ನೀವು ಹೇಗೆ ಅವಕಾಶ ಕೊಟ್ಟಿರಿ ಎಂದು ಕೇಳುವುದು ಸರಿಯಲ್ಲ. ಮಾನ್ಯ ಸಭಾಧ್ಯಕ್ಷರೆ, ದಯಮಾಡಿ ಈ ಪದ್ಧತಿ ಮಂದುವರೆಯುವುದು ಬೇಡ. ಇಡೀ ದೇಶದಲ್ಲೇ ನಮ್ಮ ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಮಾದರಿಯಾಗುವಂತಹ ರೀತಿಯಲ್ಲಿ ನಡೆಯಬೇಕು. ಈ ರೀತಿ ಬೇಕು ಬೇಕಾದವರು ಮಾತನಾಡಿದರೆ ಹೇಗೆ? ಯಾರು ಬೇಕಾದರೂ ಎದ್ದು ಮಾತನಾಡಬಹುದಾದರೆ ನೀವೇಕೆ ಇರಬೇಕು? ನಿಮ್ಮ ಮಾತನ್ನು ಕೇಳುವುದಿಲ್ಲವೆಂದರೆ ಈ ಸದನ ಹೇಗೆ ನಡೆಯಬೇಕು? ಪ್ರತಿಯೊಂದಕ್ಕೂ ನಿಮ್ಮನ್ನು ದೂಷಿಸುತ್ತಾರೆ. ಒಟ್ಟಾರೆಯಾಗಿ ಇಲ್ಲಿ ಸದನ ಸರಿಯಾಗಿ ನಡೆಯುವುದಿಲ್ಲ, ಈ ಸರ್ಕಾರ ಹೀಗಿದೆ, ಅಧ್ಯಕ್ಷರು ಹೀಗೆ ಎಂದು ತೋರಿಸಬೇಕಾದಂತಹ ಏಕೈಕ ಉದ್ದೇಶ ಅವರದ್ದು ಬಿಟ್ಟರೆ, ಬೇರೆನೂ ಉದ್ದೇಶವಿಲ್ಲ ಎನ್ನುವಂತಹ ಭಾವನೆ ಬರುತ್ತಿದೆ. ದಯಮಾಡಿ ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನದ ಎಲ್ಲಾ ಸದಸ್ಯರಿಗೆ ತಮ್ಮ ಅನುಮತಿ ಇಲ್ಲದೆ ಬೇರೆಯವರು ಮಾತನಾಡುವಂತಾದ್ದನ್ನು ನಿಲ್ಲಿಸಿದರೆ ಇದು ಸರಿ ಹೋಗುತ್ತದೆ ಎನ್ನುವಂತಹ ಮಾತನ್ನು ನಾನು ಹೇಳುತ್ತೇನೆ. ದಯಮಾಡಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನದ ಘನತೆ ಗೌರವಗಳನ್ನು ಉಳಿಸಿಕೊಳ್ಳಲಿಕ್ಕೆ ತಾವು ತಮ್ಮ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಿದ್ದೀರಿ, ಇದನ್ನು ಎಲ್ಲಾ ಸದಸ್ಯರೂ ಕೂಡ ತಿಳಿದುಕೊಳ್ಳಬೇಕು ಎನ್ನುವಂತಹ ಭಾವನೆಯನ್ನು ನಾನು ವ್ಯಕ್ತಪಡಿಸಿ, ದಯಮಾಡಿ ಮುಂದೆ ಈ ರೀತಿಯಾಗದಂತೆ ಈ ಸದನವನ್ನು ನಡೆಸಿಕೊಂಡು ಹೋಗಬೇಕು ಎನ್ನುವಂತಹ ಮನವಿಯನ್ನು ನಾನು ಮಾಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್ : ಆ ಪದ ನಿಮಗೆ ತಪ್ಪೇ?

ಶ್ರೀ ಬಸವರಾಜ ಎಸ್. ಹೊರಟ್ಟಿ : ಯಾವುದು?

ಶ್ರೀ ಎಸ್. ರಾಜೇಂದ್ರನ್ : ಇವರು ಬಹಳ ಯೋಗ್ಯತೆಯುಳ್ಳವರು.

ಶ್ರೀ ಬಸವರಾಜ ಎಸ್. ಹೊರಟ್ಟಿ : ಅದಲ್ಲ. ಮಾನ್ಯ ರಾಜೇಂದ್ರನ್‌ರವರೆ, ನಾನು ಅದನ್ನು ಹೇಳಲಿಲ್ಲ. ಒಂದು ನಿಮಿಷ . . .

(ಗೊಂದಲ)

ಶ್ರೀ ಎಂ.ಪಿ.ವೆಂಕಟೇಶ್ : ನಿಮಗೆ ಕನ್ನಡವೇ ಬರುವುದಿಲ್ಲ.

ಶ್ರೀ ಎಸ್. ರಾಜೇಂದ್ರನ್ : ನನಗೆ ಕನ್ನಡ ಬರುತ್ತದೋ ಇಲ್ಲವೋ ಎಂದು ಹೇಳತಕ್ಕ ಅಧಿಕಾರ ನಿಮಗೆ ಇಲ್ಲ. ನನಗೆ ಹೇಗೆ ಬರುತ್ತದೋ ಹಾಗೆ ನಾನು ಮಾತನಾಡುತ್ತೇನೆ. ಸುಮ್ಮನಿರಿ. ನೀವು ಬಹಳ ಓದಿದವರ ತರಹ ಮಾತನಾಡುತ್ತೀಯಾ? You are insulting me.

ಶ್ರೀ ಎಂ.ಪಿ. ವೆಂಕಟೇಶ್ : ನಿಮ್ಮ ಕನ್ನಡ ಸರಿ ಇದೆಯೇ?

(ಗೊಂದಲ)

ಶ್ರೀ ಎಸ್. ರಾಜೇಂದ್ರನ್ : . . . ನಾನೇನೂ ದೊಡ್ಡ ಪಂಡಿತ ಎಂದು ನೀವು ತಿಳಿದುಕೊಳ್ಳಬೇಡಿ. ಏನು ಪದ ನಿಮಗೆ ಗೊತ್ತಿದೆ, ಹೇಳಿ? ನಿಮಗೆ ಏನು ಕನ್ನಡ ಗೊತ್ತಿದೆಯೋ ಅದನ್ನು ಈ ಸದನದಲ್ಲಿ ಹೇಳಿ ನೋಡೋಣ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ನೀವ್ಯಾಕೆ ಮಾತನಾಡುತ್ತಿದ್ದೀರಿ?

(ಗೊಂದಲ)

ಶ್ರೀ ಎಸ್. ರಾಜೇಂದ್ರನ್ : ನನಗೆ ಕನ್ನಡ ಗೊತ್ತಿಲ್ಲ ಎಂದು ಹೇಳುತ್ತೀರಲ್ಲಾ. ನೀವು ಪಂಡಿತರ ಮನೆಯಲ್ಲಿ ಹುಟ್ಟಿದವರಾ? ಇಲ್ಲ ತಮಿಳು ಮನೆಯಲ್ಲಿ ಹುಟ್ಟಿದವರಾ? ನೀವು ಯಾರು ನನಗೆ ಉಪದೇಶ ಹೇಳುವುದಕ್ಕೆ? ಮಾನ್ಯ ಅಧ್ಯಕ್ಷರು ನನಗೆ ಹೇಳಬೇಕು. ನೀವು ನನಗೆ ಹೇಳತಕ್ಕಂಥ ಅವಶ್ಯಕತೆ ಇಲ್ಲ. You have no business to insult me.

(ಗೊಂದಲ)

ಶ್ರೀ ಎಸ್. ರಾಜೇಂದ್ರನ್ : ಅಧ್ಯಕ್ಷರೆ, ತಾವು ನನಗೆ ಹೇಳಬೇಕು.

ಶ್ರೀ ಬಸವರಾಜ ಎಸ್. ಹೊರಟ್ಟಿ : ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಮಿಷ ಕ್ಲಾರಿಫೈ ಮಾಡುತ್ತೇನೆ. ನಾನು ಯೀಲ್ಡ್ ಆಗಿಲ್ಲ. ಸಾರ್, ನಾನೇನು ಹೇಳಿದೆ ಎಂದರೆ, ಅವರು ಅಯೋಗ್ಯರು ಎನ್ನುವಂತಹ ಮಾತನ್ನೇನು ಹೇಳಿದರೋ, ಅದರ ಬಗ್ಗೆ ನಾನು ಮಾತನಾಡಲಿಲ್ಲ. ಮಾನ್ಯ ಮಾಧುಸ್ವಾಮಿಯವರು ಏನು ಹೇಳಿದರು ಎಂದರೆ, ನೀವು ಹೇಗೆ ಕೊಟ್ಟಿರಿ? ಹೇಗೆ ಹೇಳಿದಿರಿ? ನಿಮಗೇನು ಅಧಿಕಾರ ಇದೆ ಎನ್ನುವಂತಹ ಮಾತನ್ನು ಹೇಳಿದರು. ಮಾನ್ಯ ವಾಟಾಳ್ ನಾಗರಾಜ್‌ರವರೂ ಸಹ ಅದೇ ರೀತಿಯ ಮಾತುಗಳನ್ನು ಆಡಿದರು. 'ನಾಲಾಯಕ್', ಅಧ್ಯಕ್ಷರಿಗೆ ಧಿಕ್ಕಾರ' ಮುಂತಾದ ಮಾತುಗಳನ್ನು ಹೇಳಬಾರದು ಮತ್ತು ಕೂಗಬಾರದು ಎಂಬ ಬಗ್ಗೆ ನಾನು ಹೇಳಿದೆನೇ ಹೊರತು, ಇನ್ನೊಂದು ಶಬ್ದದ ಬಗ್ಗೆ ನಾನು ಮಾತನಾಡಿಲ್ಲ. ಈಗ ಶಬ್ದಗಳನ್ನು ಬಳಸಬೇಕಾದರೆ ಎಚ್ಚರದಿಂದ ಬಳಸಬೇಕು. ಈ ಪದಗಳಿಗೆ ಬಹಳಷ್ಟು ಡಿಕ್ಷನರಿಗಳಲ್ಲಿ ಬಹಳ ಅರ್ಥಗಳಿರುತ್ತವೆ. ಬಹಳ ಸಂದರ್ಭಗಳಲ್ಲಿ ಬಹಳ ಅರ್ಥಗಳಿರುತ್ತವೆ. ಈಗ ನೀವು ಮತ್ತು ಮಾನ್ಯ ವೆಂಕಟೇಶ್‌ರವರು ಪರಸ್ಪರ ಮಾತನಾಡಿದರು. ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ಏನು ಮಾತನಾಡಬೇಕು ಹೇಳಿ. ಏನೇ ಇದ್ದರೂ ಈ ಸದನದಲ್ಲಿ ಮಾನ್ಯ ಅಧ್ಯಕ್ಷರಿಗೇ ಹೇಳಬೇಕು. ಅದನ್ನು ಬಿಟ್ಟು ನಾವು ನಾವೇ ಮಾತನಾಡಿದರೆ ಈ ಸದನವನ್ನು ಹೇಗೆ ನಡೆಸಲಿಕ್ಕೆ ಆಗುತ್ತದೆ? ನಿಮಗೆ ಏನು ಬೇಕಾದರೂ ಮಾನ್ಯ ಅಧ್ಯಕ್ಷರಿಗೆ ಹೇಳಿ. ಮಾನ್ಯ ವೆಂಕಟೇಶ್‌ರವರು ತಪ್ಪು ಮಾಡಿದ್ದಾರೆ ಎಂದರೆ, ವೆಂಕಟೇಶ್ ಕರೆಕ್ಟಾಗಿ ಹೇಳಲಿಲ್ಲ ಎಂದರೆ ನೀವು ಅದರ ಬಗ್ಗೆ ಮಾನ್ಯ ಅಧ್ಯಕ್ಷರಿಗೆ ಹೇಳಿ. ನೀವು ನೀವೇ ಮಾತನಾಡಿಕೊಂಡು, ಹಾಗೆ, ಹೀಗೆ ಎಂದರೆ ಈ ಸದನ ಎಲ್ಲಿಗೆ ಹೋಗುತ್ತದೆ ಎಂಬುದನ್ನು ಹೇಳಿ.

Sri. S. Rajendran : Sorry. You cannot interpret in a wrong way. ನಾನು ಏನು ಹೇಳಿದೆ ಎಂದರೆ . . . . .

ಶ್ರೀ ಬಸವರಾಜ್ ಎಸ್. ಹೊರಟ್ಟಿ : ನೀವು ಮಾನ್ಯ ವೆಂಕಟೇಶ್‌ಗೆ ಏನು ಮಾತನ್ನು ಹೇಳಿದಿರಿ, ಹೇಳಿ.

ಶ್ರೀ ಎಸ್. ರಾಜೇಂದ್ರನ್ : ಒಂದು ನಿಮಿಷ, ಹೇಳುತ್ತೇನೆ. ನಿಮ್ಮ ಪದ ಸರಿಯಿಲ್ಲ ಎಂದು ಹೇಳುವ ಅಧಿಕಾರ ಮಾನ್ಯ ವೆಂಕಟೇಶ್‌ಗೆ ಇಲ್ಲ. ನನ್ನ ಪದ ಸರಿ ಇದೆಯೋ, ಇಲ್ಲವೋ ಎನ್ನುವುದನ್ನು ಮಾನ್ಯ ಅಧ್ಯಕ್ಷರು ಹೇಳಬೇಕು. He has no business to tell to me.

(ಗೊಂದಲ)

ಶ್ರೀ ಬಸವರಾಜ ಎಸ್. ಹೊರಟ್ಟಿ : ಮಾನ್ಯ ರಾಜೇಂದ್ರನ್‌ರವರೆ, ತಾವು ಮಾನ್ಯ ವೆಂಕಟೇಶ್‌ರವರಿಗೆ ಏನೊಂದು ಮಾತನ್ನು ಹೇಳಿದಿರೋ, ಅದನ್ನು ಮಾನ್ಯ ಅಧ್ಯಕ್ಷರಿಗೇ ಹೇಳಿ ಎಂದು ಹೇಳುತ್ತಿದ್ದೇನೆ. ಸದನದ ಕಲಾಪಗಳು ಸರಿಯಾಗಿ ನಡೆಯಬೇಕಾದರೆ ಏನಾದರೂ ಹೇಳಬೇಕೆಂದರೆ, ನೇರವಾಗಿ ಮಾನ್ಯ ಅಧ್ಯಕ್ಷರಿಗೇ ಹೇಳಬೇಕು. ಅದನ್ನು ಬಿಟ್ಟು ನೀವು ನೀವೇ ಗುದ್ದಾಡಿದರೆ ಮಾನ್ಯ ಅಧ್ಯಕ್ಷರು ಸಭೆಯನ್ನು ಹೇಗೆ ನಡೆಸಬೇಕು ಹೇಳಿ? ನಿಯಮದ ಪ್ರಕಾರ ಸದನ ನಡೆಸಲು ನಾವು ಅವರಿಗೆ ಸಹಕರಿಸಬೇಕಾಗುತ್ತದೆ.

ಶ್ರೀ ಎಸ್. ರಾಜೇಂದ್ರನ್ : ತಾವು ಈಗ ನನಗೆ ತಾನೇ ಹೇಳುತ್ತಿದ್ದೀರಿ, ಈ ಮಾತನ್ನು ತಾವು ಅಧ್ಯಕ್ಷರ ಮೂಲಕ ನನಗೆ ಹೇಳಲಿಲ್ಲವೇ? ಇಲ್ಲಿ practice ಹೇಗಿದೆ ಎಂದರೆ, ನಾನು ತಪ್ಪು ಮಾಡಬಹುದು, ಮಂತ್ರಿಗಳು ತಪ್ಪು ಮಾಡಬಾರದು.

ಶ್ರೀ ಬಸವರಾಜ್ ಎಸ್. ಹೊರಟ್ಟಿ : ನಾನು ಹಾಗೆ ಹೇಳಲಿಲ್ಲ.

ಶ್ರೀ ಎಸ್. ರಾಜೇಂದ್ರನ್ : ತಾವು ಮಾನ್ಯ ಅಧ್ಯಕ್ಷರಿಗೆ ಈ ಮಾತನ್ನು ಹೇಳಬೇಕೇ ಹೊರತು, ನನಗಲ್ಲ.

ಶ್ರೀ ಬಸವರಾಜ್ ಎಸ್. ಹೊರಟ್ಟಿ : ಮಾನ್ಯ ಅಧ್ಯಕ್ಷರ ಮುಖಾಂತರವೇ ನಾನು ತಮಗೆ ಆ ಮಾತುಗಳನ್ನು ಹೇಳಿದೆ.

Sri. S. RAJENDRAN : Turn your face to hon speaker, not to me.

ಶ್ರೀ ಬಸವರಾಜ್ ಎಸ್. ಹೊರಟ್ಟಿ : ಆಯಿತು, ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ರಾಜೇಂದ್ರನ್‌ರವರಿಗೆ ಏನು ಹೇಳಬೇಕೆಂದರೂ ನಿಮ್ಮನ್ನು ಕೇಳಿ ಮಾತನಾಡಬೇಕು ಎಂದು ಹೇಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಮುಂದೆ ಆ ರೀತಿ ನಡೆಯುವಂತೆ ಅವರಿಗೆ ಹೇಳಬೇಕೆಂದು ಕೋರುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಸಾರ್, ಏಕೋ ಇತ್ತೀಚಿನ ದಿವಸಗಳಲ್ಲಿ ನಮ್ಮ ಸದನದ ನಡವಳಿಕೆಗಳಲ್ಲಿ ಬಹಳ ವ್ಯತ್ಯಾಸಗಳಾಗುತ್ತಿವೆ. ನಾನು 13 ವರ್ಷಗಳಿಂದ ಇಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ಅತ್ಯಂತ ನೋವಾಗುತ್ತಿದೆ. 1994ನೇ ಇಸವಿಯಿಂದ ನಾವು ಹೇಗೆ ನಡೆದುಕೊಂಡು ಬಂದೆವು, ಅದಕ್ಕಿಂತ ಮೊದಲು ನಾವು ನೋಡಲೇ ಇಲ್ಲ, ಏಕೆಂದರೆ ಆಗ ನಾವು ಸದನದಲ್ಲಿ ಇರಲಿಲ್ಲ, ಆ ಪೀಠಕ್ಕಂತೂ ಅಪಾರವಾದಂತಹ ಗೌರವವನ್ನು ಕೊಟ್ಟುಕೊಂಡು ನಾವೆಲ್ಲಾ ಬಂದೆವು. ಈ ಒಂದು ತಿಂಗಳಿನಲ್ಲಿ ಸದನದಲ್ಲಿ ಈ ರೀತಿ ಶಬ್ದಗಳನ್ನು ಬಳಸಬಹುದು ಮತ್ತು ಆ ಪೀಠವನ್ನು ಹಂಗಿಸಬಹುದು, ಹಂಗಿಸಿಯೂ ಕೂಡ ನಾವು ಇಲ್ಲಿ ಕುಳಿತುಕೊಂಡು businessನಲ್ಲಿ ಭಾಗವಹಿಸಬಹುದು

ಎನ್ನುವಂತಾದ್ದು ಫಸ್ಟ್ ಟೈಮ್ ನನಗೆ ಗೊತ್ತಾಗಿದೆ. ಇದಕ್ಕಿಂತ ಹೆಚ್ಚು ಇಲ್ಲಿ ಮೊದಲನೇ ಸಾರಿ ಬಂದಂತಹ ಶಾಸಕರಿದ್ದಾರೆ. ಈಗಾಗಲೇ ಮಾನ್ಯ ಅನ್ನದಾನಿಯವರು ಹೇಳಿದಂತೆ, ಅವರಿಗೆ ಮಾರ್ಗದರ್ಶನ ಸಿಗಬೇಕಾಗಿದೆ. ಮುಂದಿನ ದಿನಗಳಲ್ಲಿ ಅವರ ನಡವಳಿಕೆಗಳನ್ನೆಲ್ಲಾ ಸರಿ ಮಾಡಿಕೊಳ್ಳಬೇಕಾಗುತ್ತದೆ. ಬಹುಶಃ ಬಹಳಷ್ಟು ಹಿರಿಯರು ಇದರಲ್ಲಿ ಸ್ವಲ್ಪ ಎಡವಟ್ಟಾಗಿ, ತಪ್ಪಾದರೂ ಕೂಡ, ನಿಲ್ಲಿಸಿ, ನಮ್ಮ ನಮ್ಮ ಪಕ್ಷದವರೇ ನಮಗೆ ಹೇಳಿರತಕ್ಕಂಥಾದ್ದೂ ಕೂಡ ಉಂಟು. ಸರಿ ಮಾಡಿಕೊಳ್ಳತಕ್ಕಂಥದ್ದು ಮತ್ತು ಅಧ್ಯಕ್ಷ ಪೀಠದಿಂದ ಏನೊಂದು ತೀರ್ಮಾನಗಳು ಬರುತ್ತವೋ, ಅದಕ್ಕೆ ತಲೆಬಾಗಿ ಹೋಗತಕ್ಕಂಥಾದ್ದು ಇತ್ತು. ಖಂಡಿತವಾಗಿಯೂ ಏಕೋ ಇವತ್ತು ಸರಿಯಾಗಲಿ. ಅದರಿಂದ ದಯಮಾಡಿ ನಾನು ಮಾನ್ಯ ಕಾನೂನು ಸಚಿವರಲ್ಲಿಯೂ ಕೂಡ ವಿನಂತಿ ಮಾಡಿಕೊಳ್ಳುತ್ತೇನೆ. ಅವರನ್ನೂ ಕೂಡ ಬೇಕಾದರೆ ತಮ್ಮ ಛೇಂಬರ್‌ಗೆ ಕರೆದು, ಒಂದು ತಿಳಿಯಾದಂತಹ ವಾತಾವರಣವನ್ನೂ ನಿರ್ಮಾಣ ಮಾಡತಕ್ಕಂಥ ಅವಶ್ಯಕತೆ ಇದೆ ಎಂದು ನನಗನ್ನಿಸುತ್ತದೆ. ಸ್ವಲ್ಪ ಹೊತ್ತು ಬೇಕಾದರೆ ಸದನವನ್ನು ಮುಂದೂಡಿ, ಅವರನ್ನು ಕರೆದು ಮಾತನಾಡಿದರೆ ಒಳ್ಳೆಯದು. ಅವರವರ ತಪ್ಪಿನ ಅರಿವು ಅವರಿಗೆ ಆಗಬೇಕಾಗುತ್ತದೆ. ಇದು ಸತ್ ಸಂಪ್ರದಾಯವಾಗುವುದಿಲ್ಲ ಎಂದು ನನಗನಿಸುತ್ತದೆ.

ಶ್ರೀ ಬಸವರಾಜ್ ಎಸ್. ಹೊರಟ್ಟಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಆರಗ ಜ್ಞಾನೇಂದ್ರರವರು ಹೇಳಿರುವುದಕ್ಕೆ ನಾನು ನನ್ನ ಸಹಮತಿಯನ್ನು ವ್ಯಕ್ತಪಡಿಸುತ್ತೇನೆ. ಸ್ನೇಹಿತರೆಲ್ಲಾ ಮುನಿಸಿಕೊಂಡು ಹೋಗಿದ್ದಾರೆ. ದಯಮಾಡಿ ಒಂದು ಹತ್ತು ನಿಮಿಷ ಸಭೆಯನ್ನು adjourn ಮಾಡಿ. ಅವರನ್ನೆಲ್ಲಾ ತಮ್ಮ ಛೇಂಬರ್‌ಗೆ ಕರೆದು ಮಾತನಾಡಿ. ಅವರೆಲ್ಲರೂ ಸದನದಲ್ಲಿ ಇರಬೇಕು. ವಿರೋಧ ಪಕ್ಷದವರಿಲ್ಲದೆ ಈ ಸದನವನ್ನು ನಡೆಸುವುದು ಸರಿ ಅನ್ನಿಸುವುದಿಲ್ಲ. ಆದ್ದರಿಂದ ದಯಮಾಡಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಎಲ್ಲಾ ಸ್ನೇಹಿತರನ್ನೂ ತಮ್ಮ ಛೇಂಬರ್‌ಗೆ ಕರೆಯಿರಿ. ಇಂತಹ ಘಟನೆಗಳು ಆಗದಂತೆ ನಾವೆಲ್ಲರೂ ಎಚ್ಚರಿಕೆಯನ್ನು ವಹಿಸಲಿಕ್ಕೆ ಚರ್ಚೆ ಮಾಡೋಣ. ಚರ್ಚೆ ಮಾಡಿ, ಮತ್ತೆ ಬಂದು ಸದನವನ್ನು ನಡೆಸಿದರೆ ಸೂಕ್ತ ಎಂದು ತಮ್ಮಲ್ಲಿ ನನ್ನ ವಿನಂತಿ ಇದೆ. ದಯಮಾಡಿ ನನ್ನ ವಿನಂತಿಯನ್ನು ಮನ್ನಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಸಿ. ಪಾಟೀಲ್ (ನರಗುಂದ) : ಮಾನ್ಯ ಅಧ್ಯಕ್ಷರೆ. ಮಾನ್ಯ ಆರಗ ಜ್ಞಾನೇಂದ್ರರವರು ಹಾಗೂ ಮಾನ್ಯ ಕಾನೂನು ಸಚಿವರು ಹೇಳಿದ್ದಕ್ಕೆ ನಮ್ಮೆಲ್ಲರ ಸಹಮತಿ ಇದೆ. ಆದರೆ ಭಾರತೀಯ ಜನತಾ ಪಕ್ಷ ಹಾಗೂ ಜೆ.ಡಿ. (ಎಸ್) ನೇತೃತ್ವದ ಪಕ್ಷಗಳು ಕೂಡಿಕೊಂಡು ಸರ್ಕಾರವನ್ನು ರಚನೆ ಮಾಡಿದ ನಂತರ, ವಿರೋಧ ಪಕ್ಷದ ಸಾಲಿನಲ್ಲಿ ಕುಳಿತಂತಹ ಮಹಾನ್ ನಾಯಕರು, ಆ ಪೀಠದ ಬಗ್ಗೆ, ಮಾನ್ಯ ಆರಗ ಜ್ಞಾನೇಂದ್ರರವರು ಹೇಳಿದ ರೀತಿಯಲ್ಲಿ, ಆ ಪೀಠದಿಂದ ನನಗೆ ಇದೇ ರೀತಿಯಾಗಿ ತಾವು ನಿರ್ದೇಶನವನ್ನು ಕೊಡಬೇಕು, ಇದೇ ರೀತಿಯಾಗಿ ನಿಮ್ಮ ನಿರ್ಣಯ ಬರಬೇಕು ಎಂದು ಹೇಳುವಂತಹ ರೀತಿ ಸರಿಯಲ್ಲ. ಪ್ರತಿಯೊಂದು ಹಂತದಲ್ಲೂ ಅವರು ವಿರೋಧ ಪಕ್ಷದ ಸಾಲಿನಲ್ಲಿ ಕುಳಿತು ಕೆಲಸ ಮಾಡಿದ್ದಾರೆ. ನೀವು ಕೊಡುವ ನಿರ್ಣಯಕ್ಕೆ ಅವರು ಬಾಧ್ಯಸ್ಥರಿಲ್ಲ, ಅವರಿಗೆ ಬೇಕಾದಂತಹ ನಿರ್ಣಯ ಆ ಪೀಠದಿಂದ ನಿಮ್ಮ ಮುಖಾಂತರ ಬರಬೇಕು ಎನ್ನುವುದನ್ನು ಅವರು ನಿರೀಕ್ಷೆ ಮಾಡುತ್ತಿದ್ದಾರೆ. ಇದು ತಪ್ಪು ಸಾರ್. ಆಮೇಲೆ ನನ್ನ ಸ್ನೇಹಿತರಾದಂತಹ ಮಾನ್ಯ ಅನ್ನದಾನಿಯವರು ಹೇಳಿದ ಪ್ರಕಾರ, ಅಲ್ಲಿ ನಾಲ್ಕೈದು ಜನ ಒಂದೊಂದು ಪಕ್ಷದಿಂದ ಒಬ್ಬೊಬ್ಬರೇ

ಬಂದಿರಬಹುದು, ಅವರ ಕಡೆ ಅಪಾರವಾದ ಜ್ಞಾನವಿದೆ, ನಾವೂ ಅವರಿಂದ ಕಲಿಯಬೇಕಾಗಿದೆ. ಆದರೆ ಮುಂದಿನ ಯಾವುದೇ ಚುನಾವಣೆಯಲ್ಲಿ ಆಕಸ್ಮಿಕವಾಗಿ ಅವರು ಸ್ಪರ್ಧಿಸದೇ ಹೋದರೆ, ಈ ಸದನಕ್ಕೆ ಅನುಭವದ ಕೊರತೆ ಆಗಬಾರದು. ಅದಕ್ಕಾಗಿ ಎಲ್ಲರಿಗೂ ಸಮಯವನ್ನು ನಿಗದಿ ಮಾಡಿ. ಆಕಸ್ಮಿಕವಾಗಿ ಯಾವುದೇ ಕಾರಣಕ್ಕೆ ಆ ಮೂರು ಮಂದಿ ಸದನಕ್ಕೆ ಬರಲಿಲ್ಲ ಎಂದರೆ, ಇಲ್ಲಿ ಏನೋ ನಡೆಯುತ್ತದೆ, ಇಲ್ಲಿ ಕಾನೂನಿನ ಜ್ಞಾನ ಇರುವವರು ಇಲ್ಲ, Totally it is vacuumed ಎನ್ನುವಂತಹ ವಾತಾವರಣ ನಿರ್ಮಾಣವಾಗಬಾರದು. ಯಾರ್ಯಾರು ಎಷ್ಟೆಷ್ಟು ಸಮಯವನ್ನು ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ತಾವು ಕಡತವನ್ನು ತೆಗೆಸಿ ನೋಡಬೇಕು. ನಾನೊಬ್ಬನೇ ಹರಿಶ್ಚಂದ್ರ, ನಾನೊಬ್ಬನೇ ಇಂದ್ರ, ನಾನೊಬ್ಬನೇ ಚಂದ್ರ, ತಜ್ಞ ಎನ್ನುವಂತಹ ಭಾವನೆ ಯಾರಲ್ಲೂ ಬರಬಾರದು ಸಾರ್. ನಾವೂ ಕಲಿಯಬೇಕಾಗಿದೆ. ಅವರು 3–4 ಸಲ ಆರಿಸಿ ಬಂದಿರಬಹುದು. ನಾವು ಮೊದಲನೇ ಸಾರಿ ಆರಿಸಿ ಬಂದಿರಬಹುದು. ಮೊದಲನೇ ಸಾರಿ ಆರಿಸಿ ಬಂದಿದ್ದರೂ, ಅವರು 3–4 ಸಾರಿ ಆರಿಸಿ ಬಂದಿದ್ದಾರೆ ಎನ್ನುವಂತಹ ಭಾವನೆ ಮಾನ್ಯ ಹಿರಿಯ ಸಚಿವರಲ್ಲಿ ಇರಬೇಕು. ಹಿರಿಯ ಶಾಸಕರಾದ ಅವರೇ ಎಲ್ಲಾ ಸಮಯವನ್ನು ನುಂಗಿ, ಆ ಪೀಠದಿಂದ ಇದೇ ರೀತಿ ನಿರ್ಣಯ ಬರಬೇಕು ಎನ್ನುವಂತಹ ರೀತಿಯಲ್ಲಿ, ಪೇಪರ್‌ಗಳನ್ನೆಲ್ಲಾ ತೂರಿ ಒಗೆದದ್ದು ನೋಡಿದರೆ, **xx** ಅನಿಸುತ್ತಿದೆ. ಅದಕ್ಕಾಗಿ ತಾವು ಸಮಯವನ್ನು ನಿಗದಿ ಮಾಡುವಾಗ, ಅವರು ಎಷ್ಟೇ ಹಿರಿಯ ಶಾಸಕರಿದ್ದರೂ ಕೂಡ, ಅವರಿಗೆ ಒಮ್ಮೆ ಅಥವಾ ಎರಡು ಸಲ ಅವಕಾಶ ಕೊಡಿ. ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಉಳಿದವರಿಗೆ repeatedly ಅವಕಾಶವನ್ನು ಕೊಡಬಾರದು ಎಂದು ಹಿಂದಿನ ಭಾಗದ ಎಲ್ಲಾ ಶಾಸಕರ ಪರವಾಗಿ ನಾನು ಕೇಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಇತ್ತೀಚಿನ ಘಟನಾವಳಿಗಳನ್ನು ನಾವು ನೋಡುತ್ತಿದ್ದೇವೆ. ಇದು ಇವತ್ತೇ ನಡೆಯುತ್ತಿರುವಂತಾದ್ದು ಅಲ್ಲ. ಇತ್ತೀಚೆಗೆ ಕಳೆದ ಒಂದು ತಿಂಗಳಿನ ಹಿಂದಿನ ಅಧಿವೇಶನದಲ್ಲಿ ನಾವು ನೋಡಿದ್ದೇವೆ. ಯಾವಾಗ ಗೌರವಾನ್ವಿತ ರಾಷ್ಟ್ರಪತಿಗಳ ಭಾಷಣವಾಯಿತೋ, ಆಮೇಲೆ ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಒಂದು ಸಲ ತಾವು ತೀರ್ಮ ಕೊಟ್ಟಿರಿ, ತಾವು ತೀರ್ಪು ಕೊಟ್ಟ ಮೇಲೆ, ಅದನ್ನು ಮತ್ತೆ ಪದೇ ಪದೇ ಸದನದಲ್ಲಿ ಚರ್ಚೆಗೆ ತೆಗೆದುಕೊಳ್ಳುವಂತಾದ್ದು, ಆ ರೀತಿ ಪರಿಸ್ಥಿತಿ ನಿರ್ಮಾಣ ಮಾಡುತ್ತಿರುವುದನ್ನು ಹಿರಿಯ ಸದಸ್ಯರಿಂದ ನಾವು ನೋಡುತ್ತಿದ್ದೇವೆ. ಇದು ಏಕೆ ಹೀಗಾಗುತ್ತಿದೆ? ಒಂದು ಸಲ ಮಾನ್ಯ ಸಭಾಧ್ಯಕ್ಷರು ಏನು ತೀರ್ಪು ಕೊಡುತ್ತಾರೋ, ಅದು ಫೈನಲ್, ಅಂತಿಮ. ಅದನ್ನು ಮತ್ತೆ question ಮಾಡಲಿಕ್ಕೆ ಬರುವುದಿಲ್ಲ. ಅದನ್ನು ಮತ್ತೊಮ್ಮೆ ಪುನರ್ ಪರಿಶೀಲನೆ ಮಾಡಿ ಎಂದು ಗೌರವಯುತವಾಗಿ ನೀವು ವಿನಂತಿ ಮಾಡಿಕೊಳ್ಳಲಿಕ್ಕೆ ಸಾಧ್ಯವಿದೆಯೇ ಹೊರತು, ಅದನ್ನು ಪಟ್ಟು ಹಿಡಿದು, ಮತ್ತೊಮ್ಮೆ ನೀವು ಚರ್ಚೆಗೆ ತೆಗೆದುಕೊಳ್ಳಬೇಕು, ನಿಮ್ಮ ತೀರ್ಮ ಸರಿಯಲ್ಲ ಎನ್ನುವುದು ಸರಿಯಲ್ಲ. ನಿಮ್ಮ ತೀರ್ಪೇ ಸರಿಯಲ್ಲ ಎನ್ನುವಂತಹ ರೀತಿಯಲ್ಲಿ ಮಾತನಾಡುವಂತಾದ್ದು ಮತ್ತು ನಡವಳಿಕೆ, ಇವತ್ತು ಬಹಳ ಮಹತ್ವವಾದುದು ಸನ್ಮಾನ್ಯ ಸಭಾಧ್ಯಕ್ಷರೆ, body language ಏನಿದೆಯೋ, ಆ body language, ಇವತ್ತು ಆ ನಡವಳಿಕೆಯನ್ನು ನಾವು ನೋಡಿದಾಗ ನಮಗೆ ಈ ರೀತಿಯಾದಂತಹ ನಡವಳಿಕೆ ಬಹುಶಃ ನಾನು ಈ ಸದನದಲ್ಲಿ ಯಾವಾಗಲೂ ನೋಡಿಲ್ಲ. ನಾನೂ ಹತ್ತು ವರ್ಷಗಳಿಂದ ಇಲ್ಲಿ ಇದ್ದೇನೆ. ಐದು ವರ್ಷಗಳ ಕಾಲ ಇಲ್ಲಿ ಪ್ರತಿಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಮಾನ್ಯ

---

xx ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಸಭಾಧ್ಯಕ್ಷರೆ, ಹಿಂದೆ ಕಾಂಗ್ರೆಸ್ ಮತ್ತು ಜೆ.ಡಿ. (ಎಸ್) ಸಮ್ಮಿಶ್ರ ಸರ್ಕಾರ ಇದ್ದಂತಹ ಸಂದರ್ಭದಲ್ಲಿ, ನಾವು ಅಲ್ಲಿ ಪ್ರತಿಪಕ್ಷದಲ್ಲಿದ್ದೆವು. ಪ್ರತಿ ಪಕ್ಷದ ನಾಯಕರಾಗಿ ಮಾನ್ಯ ಯಡಿಯೂರಪ್ಪನವರು ಇದ್ದರು, ನಾವೆಲ್ಲಾ ಪ್ರತಿಪಕ್ಷದಲ್ಲಿದ್ದೆವು. ಈ ರೀತಿಯಾದಂತಹ ಘಟನೆ ನಾವು ಪ್ರತಿಪಕ್ಷದಲ್ಲಿದ್ದಾಗ, ನಿಮ್ಮ ಬಗ್ಗೆ, ನಿಮ್ಮ ಪೀಠದ ಬಗ್ಗೆ ಒಂದು ಸಲವೂ ಅಗೌರವಯುತವಾದಂತಹ ರೀತಿಯಲ್ಲಿ ನಾವು ನಡೆದುಕೊಂಡಿಲ್ಲ. ಮಾನ್ಯ ಸಭಾಧ್ಯಕ್ಷರು ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ, ಆ ತೀರ್ಮ ನಮಗೆ ಸರಿ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಒಂದೊಂದು ಸಲ ಆ ತೀರ್ಪಿನ ಬಗ್ಗೆ ಅಸಮಾಧಾನವಾಗಿರಬಹುದು. ನಾನೂ ಐದು ವರ್ಷಗಳ ಕಾಲ ಪ್ರತಿ ಪಕ್ಷದ ನಾಯಕನಾಗಿದ್ದಾಗ, ಅವತ್ತು ಯಾರು ಸ್ಪೀಕರ್ ಇದ್ದರೋ, ಅವರು ಕೆಲವೊಂದು ತೀರ್ಮಗಳನ್ನು ಕೊಟ್ಟಾಗ, ನಮಗೆ ಕೆಲವೊಂದು ವಿಷಯದಲ್ಲಿ ಅಸಮಾಧಾನವಾಗಿದೆ. ಆದರೆ ನಾವು ಅದನ್ನು ಈ ರೀತಿ ನಮ್ಮ ನಡವಳಿಕೆಯಿಂದ ತೋರಿಸಲಿಲ್ಲ. ಒಂದು ಸಲ ನೀವು ತೀರ್ಮ ಕೊಟ್ಟಾದ ಮೇಲೆ, ಅದು ಸರಿಯೋ, ತಪ್ಪೋ ನಾವು ಅದನ್ನು ಗೌರವದಿಂದ ಕಂಡಿದ್ದೇವೆ. ನಾವು ಇತ್ತೀಚೆಗೆ ಪ್ರತಿಪಕ್ಷದಲ್ಲಿದ್ದಾಗ ನಿಮ್ಮ ಪೀಠಕ್ಕೆ ಗೌರವ ಕೊಟ್ಟಿದ್ದೆವು. ಆಗ ನೀವೇ ಸ್ಪೀಕರ್ ಇದ್ದಿರಿ, ನಾವು ಪ್ರತಿಪಕ್ಷದಲ್ಲಿದ್ದಾಗ ನಾವು ನಿಮ್ಮನ್ನು ಗೌರವದಿಂದ ನೋಡಿದ್ದೇವೆ. ಈ ಪೀಠವನ್ನು ಗೌರವದಿಂದ ನೋಡಿದ್ದೇವೆ. ಯಾವುದೇ ಒಂದು ಸಂದರ್ಭದಲ್ಲಿ ನಿಮ್ಮ ತೀರ್ಪಿಗೆ ನಾವು ಅಗೌರವ ಸೂಚಿಸಿಲ್ಲ. ಇದು ಆ ಪೀಠಕ್ಕೆ ಇರುವಂತಹ ಮಹತ್ವವಾಗಿದೆ. ಇಲ್ಲಿ ವ್ಯಕ್ತಿ ಮುಖ್ಯವಲ್ಲ, ಆ ಪೀಠಕ್ಕೆ ಇರುವಂತಹ ಮಹತ್ವ ಮುಖ್ಯವಾಗಿದೆ. ಇದನ್ನು ಇವತ್ತು ಅರ್ಥ ಮಾಡಿಕೊಳ್ಳಬೇಕಾಗಿದೆ. ತಾವು ಹೇಳಿದ್ದೇ ನಡೆಯಬೇಕು, ತಾವು ಹೇಳಿದ್ದೇ ಆಗಬೇಕು ಎನ್ನುವಂತಹ ಈ ರೀತಿಯಾದಂತಹ ನಡವಳಿಕೆ ಬಹುಶಃ ನನ್ನ ಹತ್ತು ವರ್ಷಗಳ ಅವಧಿಯಲ್ಲಿ ಈ ರೀತಿ ನಡೆದಿಲ್ಲ. ಇವತ್ತು ಅವರು ಇಲ್ಲಿ ಇಲ್ಲ, ಸಭಾತ್ಯಾಗ ಮಾಡಿ ಹೋಗಿದ್ದಾರೆ. ಆದರೆ ಅವರನ್ನೂ ಕರೆಸಿ ಮಾತನಾಡಬೇಕು. ಅವರು ಇಲ್ಲದಂತಹ ಸಂದರ್ಭದಲ್ಲಿ ಸದನ ಕಲಾಪ ನಡೆಸುವುದು ಸರಿಯಲ್ಲ. ಹಲವಾರು ಮಹತ್ವದ ಬಿಲ್‌ಗಳನ್ನು ಸರ್ಕಾರದವರು ತರುವವರಿದ್ದೇವೆ, ಪ್ರಶ್ನೋತ್ತರ ಇದೆ, ಅದಲ್ಲದೆ ಇನ್ನಿತರ business ಕೂಡ ಇದೆ. ಅವರ ಗೈರು ಹಾಜರಿಯಲ್ಲಿ ಸದನವನ್ನು ನಡೆಸಬೇಕೆಂದು ನಮಗೇನೂ ಮನಸ್ಸು ಇಲ್ಲ. ದಯವಿಟ್ಟು ಸದನವನ್ನು 10 ನಿಮಿಷಗಳ ಕಾಲ ಮುಂದಕ್ಕೆ ಹಾಕಿ, ಅವರನ್ನೂ ಕರೆಸಿ ಮಾತನಾಡಿ, ಇದಕ್ಕೆ ಏನಾದರೂ ಒಂದು ಪರಿಹಾರ ಹುಡುಕುವ ದಿಕ್ಕಿನಲ್ಲಿ ಪ್ರಯತ್ನ ಆಗಬೇಕೆನ್ನುವುದು ನನ್ನ ಅಭಿಪ್ರಾಯ.

ಶ್ರೀ ಡಿ. ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ನಮ್ಮ ಸರ್ಕಾರ ಬಂದ ಮೇಲೆ ಬಹುಶಃ ಕೆಲವರಿಗೆ ಇದನ್ನು ಸಹಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಹಾಗಾಗಿ, ಈ ಪೀಠದ ಮೇಲೆ ಅಗೌರವ, ಪೀಠಕ್ಕೆ ದಿಕ್ಕಾರ ಕೂಗತಕ್ಕಂತಹ ಕೆಟ್ಟ ಸಂಪ್ರದಾಯ ಪ್ರಜಾ ತಂತ್ರಕ್ಕೆ ಅಗೌರವ ತರತಕ್ಕಂತಹ ಸಂಪ್ರದಾಯ ನಮ್ಮ ಸದನದಲ್ಲಿ ನಡೆಯುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ. ಸದನದಲ್ಲಿ ನಾವು ಹೇಳಿದ್ದೇ ನಡೆಯಬೇಕು, ಸದನ ನಾವು ಹೇಗೆ ಹೇಳುತ್ತೇವೆ ಹಾಗೆ ನಡೆಯಬೇಕೆನ್ನುವುದು ಒಂದು, ಇನ್ನೊಂದು ಅಧಿಕಾರ ಹೋಗಿರುವುದನ್ನೂ ತಡೆದುಕೊಳ್ಳುವುದಕ್ಕಾಗದೆ ಇರುವಂತಹ ಒಂದು ಸಮಸ್ಯೆ ಬಹುಶಃ ಅವರಲ್ಲಿ ಇರುವ ಹಾಗೆ ಕಾಣುತ್ತದೆ. ತಾವು ಈ ಗೌರವದ ಸ್ಥಾನದಲ್ಲಿರುವವರು. ಒಂದು ನಿಜ, ಈ ರೀತಿ ವಿರೋಧ ಪಕ್ಷದವರು ಇಲ್ಲದೆ ಇರುವಂತಹ ಸಂದರ್ಭದಲ್ಲಿ ನಾವು ಯಾವುದೇ ಕಲಾಪಗಳನ್ನು ನಡೆಸಬಾರದು ನಾನೂ ಒಂದು ಮಹತ್ವದ ಬಿಲ್ಲನ್ನು ಮಂಡಿಸಬೇಕೆಂದು ತಯಾರಾಗಿ ಅವತ್ತಿನಿಂದ ಕಾಯುತ್ತಿದ್ದೇನೆ, ತಾವೂ ನನಗೆ

ಹೇಳಿ ಕಳುಹಿಸಿದಿರಿ, ಬಂದಿದ್ದೇನೆ. ಸಿಇಟಿ ಬಗ್ಗೆ ನಾನು ಬಂದು ವಿಧೇಯಕವನ್ನೂ ತರಬೇಕು, ಅದು ರಾಜ್ಯದ ಮಕ್ಕಳ ಸಮಸ್ಯೆ, ಮತ್ತು ಸುಪ್ರೀಂ ಕೋರ್ಟ್‌ನ ತೀರ್ಮಾನ ಇದೆ, ರಾಜ್ಯ ಸರ್ಕಾರದ ಜವಾಬ್ದಾರಿ ಇದೆ, ಇದರ ಬಗ್ಗೆ ಒಂದು ಬಿಲ್ ಮಾಡತಕ್ಕಂಥಾದ್ದು. ಆ ಬಿಲ್ಲನ್ನು ನಾನು ಈಗಾಗಲೇ ಸರ್ಕ್ಯುಲೇಟ್ ಮಾಡಿಸಿದ್ದೇನೆ, ಆ ಬಿಲ್ ಚರ್ಚೆ ಆಗಿ ಅದು ಅನುಮೋದನೆ ಆಗಬೇಕಾಗಿದೆ. ಇದೊಂದು ಸರ್ಕಾರದ ಜವಾಬ್ದಾರಿ ಇದೆ, ಮತ್ತು ಸುಪ್ರೀಂ ಕೋರ್ಟಿನ ಆದೇಶ ಇದೆ. ವಿರೋಧ ಪಕ್ಷದವರು ಯಾರೂ ಇಲ್ಲದೆ ಈ ಬಿಲ್ಲನ್ನು ನಾನು ಮಂಡಿಸಿದರೆ ಹೇಗೆ ಸರಿಯಾಗುತ್ತದೆ? ಅವರು ಮಾಡುತ್ತಾರೆಂದು ನಾನು ಹಾಗೆ ಮಾಡುವುದಕ್ಕೆ ಬರುವುದಿಲ್ಲ. ಚರ್ಚೆ ಆಗಬೇಕಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ನಂಬಿಕೆ ಇರಬೇಕಾಗುತ್ತದೆ, ಗೌರವಗಳನ್ನು ಎತ್ತಿ ಹಿಡಿಯಬೇಕಾಗುತ್ತದೆ. ಅವರು ಹೀಗೆ ನಡೆದುಕೊಳ್ಳುತ್ತಿರ ತಕ್ಕಂಥದ್ದು ಸರಿಯಲ್ಲ, ಅದರಿಂದ ತಾವು ದಯಮಾಡಿ ಅವರನ್ನೂ ಕರೆದು ಮಾತನಾಡಿ, ಅವರಿಗೆ ಸ್ವಲ್ಪ ತಿಳಿ ಹೇಳಿ. ಅವರನ್ನು ಕರೆಸಿ ಮತ್ತೆ ತಾವು ಸದನವನ್ನು ನಡೆಸಿದರೆ ಈ ಬಿಲ್‌ಗಳನ್ನು ನಾವು ಇಂಟ್ರಡ್ಯೂಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಹತ್ತು ನಿಮಿಷ ಸಭೆಯನ್ನು ಅಡ್ಜರ್ನ್ ಮಾಡಿ ಅವರನ್ನು ಕರೆಸಿ ತಮ್ಮ ಕೊಠಡಿಯಲ್ಲಿ ಮಾತುಕತೆ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಅಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ಈ ಒಂದು ಪವಿತ್ರವಾದ ಸದನದ ಘನತೆ ಮತ್ತು ಗೌರವಕ್ಕೆ ಬಹು ಮಟ್ಟಿಗೆ ಕಳಂಕ ಬರುತ್ತಿದ್ದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲವೆಂದು ನಾನು ಭಾವಿಸಿದ್ದೇನೆ. ಈ ಸದನದ ಸತ್ ಸಂಪ್ರದಾಯವನ್ನು ಎತ್ತಿ ಹಿಡಿಯತಕ್ಕಂಥಾದ್ದರಲ್ಲಿ ಬಹುತೇಕ ನಾವು ಹಿಂದೆ ಬೀಳುತ್ತಿದ್ದೇವೆ. ಈ ಮನೆ ರಾಜಕೀಯ ಸೇಡಿನ, ರಾಜಕೀಯ ಪಕ್ಷಗಳ ಸೇಡಿನ ತೀಟೆಯನ್ನು ತೀರಿಸಿಕೊಳ್ಳತಕ್ಕಂತಹ ಸ್ಥಳ ಇದಾಗಬಾರದು. ಅದಕ್ಕೆ ಅವಕಾಶವನ್ನು ಕೂಡ ಮಾಡಿಕೊಡಬಾರದು ಎಂಬುದು ನನ್ನ ವಿನಮ್ರ ವಿನಂತಿ. ಅಲ್ಲಿ ಕುಳಿತುಕೊಂಡು ಸದಾ ತೆಗಳುವುದು, ಅಥವಾ ಇಲ್ಲಿ ಕೂತು ಸದಾ ಹೊಗಳುವುದು ಇಟ್ಟುಕೊಳ್ಳದೆ, ಸರ್ಕಾರಕ್ಕೆ ರಚನಾತ್ಮಕವಾದ ಸಲಹೆ ಸಹಕಾರವನ್ನು ಎಲ್ಲರೂ ಕೂಡ ಕೊಟ್ಟುಕೊಂಡು ಹೋಗಬೇಕಾಗುತ್ತದೆ. ಕಳೆದ 40–45 ದಿವಸಗಳಿಂದ ನಾವೆಲ್ಲರೂ ಗಮನಿಸುತ್ತಿದ್ದೇವೆ, ಒಂದು ಮೆಂಟಲ್ ಕರಪ್‌ಷನ್ ಎಂದು ಹೇಳುತ್ತೇವೆ, ಮನಸ್ಸಿನಲ್ಲಿ ವಿಷಕಾರುವುದು. ಹೇಗೆ ಈ ಸದನ ನಡೆಯುತ್ತದೆ ಎನ್ನತಕ್ಕಂಥದ್ದನ್ನು ತೋರಿಸತಕ್ಕಂತಹ ಹಠಮಾರಿತನ ಯಾರಿಗೂ ಬರಬಾರದು. ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಇವತ್ತು ವಿರೋಧ ಪಕ್ಷದವರನ್ನು ಹೊರಗಡೆ ಇಟ್ಟು ಈ ಸದನ ನಡೆಸಬೇಕೆಂದು ಹೇಳಿ ನಮಗೆ ಯಾರಿಗೂ ಕೂಡ ಇಚ್ಛೆ ಇಲ್ಲ. ಅವರಿಂದ ನಾವು ರಚನಾತ್ಮಕವಾದ ಸಲಹೆಯನ್ನು, ಸಹಕಾರವನ್ನು ನಿರೀಕ್ಷೆ ಮಾಡುತ್ತೇವೆ. ಆ ದಿಕ್ಕಿನಲ್ಲಿ ವಿಷ ಕಾರುವುದನ್ನು ಅವರೂ ಕೂಡ ಬಿಡಬೇಕು. ತಾವು ದಯಮಾಡಿ 10–15 ನಿಮಿಷಗಳ ಕಾಲ ಈ ಸದನವನ್ನು ಮುಂದಕ್ಕೆ ಹಾಕಿ ಅವರನ್ನೂ ಕೂಡ ಕರೆಸಿ ಚರ್ಚೆ ಮಾಡಿ ಈ ಸದನದ ಘನತೆ, ಗೌರವ, ಸಂಪ್ರದಾಯವನ್ನು ಉಳಿಸಿಕೊಳ್ಳುವುದಕ್ಕೆ ಆ ರೀತಿ ನಡೆದುಕೊಂಡು ಹೋಗಲಿಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಎಸ್. ಪುಟೇಗೌಡ (ಶ್ರವಣಬೆಳಗೊಳ) : ಮಾನ್ಯ ಅಧ್ಯಕ್ಷರೆ, ನಾನು ಸದನಕ್ಕೆ ಶಾಸಕನಾಗಿ ಬಂದು 10 ವರ್ಷಗಳಾದವು. ನಾನು ನಿಜವಾಗಿಯೂ ಯಾವುದೇ ಶಾಸಕರ ಹೊಟ್ಟೆಯಲ್ಲಿ ಹುಟ್ಟಿದವನಲ್ಲ ಅಥವಾ ಶಾಸನಸಭೆಗೆ ಹೋಗಲಿಕ್ಕೆ ನಮ್ಮ ಅಪ್ಪ ಅಮ್ಮ, ನಮಗೆ ಪಾಠ ಹೇಳಿ ಕೊಟ್ಟ ಮೇಸ್ಟ್ರು ಕೂಡ ಯಾವುದೇ ತರಹದ ಟ್ರೈನ್ ಆಪ್ ಮಾಡಿಲ್ಲ. ಕೆಲಸ ಇಲ್ಲದೆ ನಿರುದ್ಯೋಗಿ ಆಗಿ ಅಲೆಯುವಾಗ ಎಲ್ಲೋ ನಮಗೆ ರಾಜಕೀಯ ಮುಖಂಡರು ಮಾನ್ಯ ದೇವೇಗೌಡರಂಥವರು, ನಮ್ಮ ಊರಿನಲ್ಲಿ ಒಬ್ಬರು ಗಂಗಣ್ಣ ಎನ್ನುವವರು ಇದ್ದರು, ಅವರ ಜೊತೆ ಓಡಾಡಿ ಅಲ್ಲಿಗೆ ಹೋಗುವುದಕ್ಕೆ ಇದೊಂದೇ ದಾರಿ ಜೀವನದಲ್ಲಿ ಮುಂದೆ ಹೋಗುವುದಕ್ಕೆ ಎಂದು ಹೇಳಿ ನಾನು ಇಲ್ಲಿಗೆ ಬಂದವನು. ಅಪ್ಪಿ ತಪ್ಪಿ ನಾನು ನಮ್ಮ ವಿರೋಧಿ ಎದುರುಗಡೆ ಶಾಸನ ಸಭೆಗೆ ಅರ್ಜಿ ಹಾಕುವಾಗಲೂ ಕೂಡ ನಾನು ಗೆಲ್ಲುತ್ತೇನೆ ಎಂದು ಗೊತ್ತಿಲ್ಲ. ಸುಮ್ಮನೆ ಒಂದು ಸಾರಿ ನಾಲ್ಕು ಜನ ಗುದ್ದಾಡಿದರು. ದೊಡ್ಡ ಮನುಷ್ಯ ಅಂತ ಎನ್ನಬಹುದು. ನನ್ನನ್ನೂ ತಾಲ್ಲೂಕು ಆಫೀಸ್‌ನಲ್ಲಿ ಪೋಲಿಸ್ ಸ್ಟೇಷನ್‌ನಲ್ಲಿ ಕರೆಸಿ ಮಾತನಾಡಬಹುದು ಎಂದು ನಿಂತವನು. 22,500 ಮತಗಳ ಅಂತರದಲ್ಲಿ ಒಬ್ಬ ರಾಜಕೀಯ ಪಂಡಿತರನ್ನ ಸೋಲಿಸಿದ ಮೇಲೆ, ನಾನು ಇಲ್ಲಿಗೆ ಬರುವಾಗ ನನಗೆ ಬಹಳ ಭಯ ಇತ್ತು. ಇಲ್ಲಿ ಎಂತೆಂತಹ ಪಂಡಿತೋತ್ತಮರು ಇದ್ದಾರೆ, ನಾನು ಅವರ ಹೆಸರುಗಳನ್ನು ಅಲ್ಲಿ ಇಲ್ಲಿ ಭಾಷಣ ಮಾಡುವಾಗ ಕೇಳಿದ್ದೆ. ಬಾಳಿಗರವರು ಇದ್ದರಂತೆ, ಆ ಕಾಲದಲ್ಲಿ ಈ ಸದನವನ್ನು ಇಡೀ ರಾಜ್ಯಕ್ಕೆ ಆದರ್ಶವಾಗಿ ತೋರಿಸಿರತಕ್ಕಂತಹ ಪ್ರತಿಭಾವಂತರೆಲ್ಲಾ ಕುಳಿತಿದ್ದ ಜಾಗದಲ್ಲಿ ನಾವು ಕೂರುವಾಗ ಐಎಎಸ್ ಅಧಿಕಾರಿಗಳು, ಪತ್ರಿಕಾ ಮಿತ್ರರು, ಎಲ್ಲಾ ತಿಳಿದುಕೊಂಡು ಕೂತಿರುವವರ ಮಧ್ಯೆ ನಾನು ಎಲ್ಲಾದರೂ ಪೆಕ್ಕರ ಹಾಗೆ ನಡೆದುಕೊಂಡು ಬಿಟ್ಟರೆ ನಮ್ಮ ಅಪ್ಪ ಅಮ್ಮ ಸ್ಕೂಲಿಗೆ ಕಳುಹಿಸಿದ್ದಕ್ಕೆ, ಅಥವಾ ಪಾಠ ಹೇಳಿಕೊಟ್ಟ ಮೇಸ್ಟ್ರುಗಳಿಗೆಲ್ಲಾ ಅವಮಾನವಾಗುತ್ತದಲ್ಲಾ ಎಂದು ಹೇಳಿ, ಮೆಟ್ಟಿಲು ಹತ್ತುವಾಗ ಮೆಲ್ಲಗೆ ಹುಷಾರಾಗಿ ಹತ್ತಿ ಇಲ್ಲಿ ಬಂದು ಕೂತುಕೊಂಡು ಆರು ತಿಂಗಳ ಕಾಲ ಎಲ್ಲವನ್ನೂ ಗಮನಿಸುತ್ತಿದ್ದೆ. ಕಳೆದ 10 ವರ್ಷಗಳಲ್ಲಿ ಸದನ ಕೂಡ ಚೆನ್ನಾಗಿ ಇತ್ತು. ನಾವು ಎಲ್ಲಾ ಬಹಳ ಭಯ ಭಕ್ತಿಯಿಂದ ಕುಳಿತು ಕೇಳುತ್ತಿದ್ದೆವು. ಎಲ್ಲೋ ಶಾಸನ ಸಭೆಯಲ್ಲಿ ನಮಗೂ ಒಂದು ಐದು ನಿಮಿಷ ಕಾಲಾವಕಾಶ ಸಿಗಬಹುದು, ನಮ್ಮದೇ ಆದ ಸಮಸ್ಯೆ ಹೇಳುವುದಕ್ಕೆ ಅಥವಾ ನನಗೂ ರಾಜಕೀಯವಾಗಿ ಯೋಗ್ಯತೆ ಇದೆ ಎಂದಾದರೂ ಜನರಿಗೆ ತಿಳಿಯಬೇಕಲ್ಲಾ ಎನ್ನುವ ದೃಷ್ಟಿಯಿಂದಲಾದರೂ ನಾವು ಮಾತನಾಡುತ್ತಿದ್ದೆವು. ಸದನ ಚೆನ್ನಾಗಿ ನಡೆಯುತ್ತಿತ್ತು. ಆ ಕಡೆ ವಿರೋಧ ಪಕ್ಷದಲ್ಲಿ ನಿಂತರೆ ಭಾವಟಿ ಏಟು ಕೊಡುತ್ತಿದ್ದರು, ನಾನೂ ರೂಲಿಂಗ್ ಪಾರ್ಟಿಯಲ್ಲಿ ಕೂತಿದ್ದೆ. ನನಗೂ ಬೆನ್ನು ತಟ್ಟಿದ ಹಾಗಾಗುವುದು. ಚೆನ್ನಾಗಿ ಹೇಳುತ್ತಿದ್ದಾರೆ, ಎಲ್ಲೆಲ್ಲಿ ಲೋಪಗಳು ಇವೆ ಎಂದು ಈ ರಾಜ್ಯಕ್ಕೆ ಮತ್ತು ಈ ಶಾಸನ ಸಭೆಗೆ ತಿಳಿ ಹೇಳುತ್ತಿದ್ದಾರೆಂದು ನನ್ನೊಳಗೆ ವಿರೋಧ ಪಕ್ಷದವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದೆ. ಈ ಕಡೆ ಕೆಲವರು ಬಹಳ ಅನುಭವಿ ರಾಜಕಾರಿಣಿಗಳು ಮಾನ್ಯ ಪಟೇಲರಂಥವರು, ದೇವೇಗೌಡರಂಥವರು ಎಲ್ಲಾ ತರಹದವರು ಬಹಳ ಜನ ಇದ್ದರು. ಇವರು ಈ ಕಡೆಯಿಂದ ರಿಪ್ಲೇ ಮಾಡುವಾಗ ಇಂತಹ ಅನುಭವದ ಮಾತುಗಳನ್ನು ನಾವು ತಿಳಿದುಕೊಳ್ಳಬೇಕೆಂದು ನಾವು ಅತ್ಯಂತ ಗಂಭೀರವಾಗಿ ಕುಳಿತುಕೊಳ್ಳುತ್ತಿದ್ದೆವು. ಈಗ ಏನಾಗಿದೆ ಎಂದರೆ, ಯಾರು ಬೇಕಾದರೂ ವಿರೋಧ ಪಕ್ಷದ ಮುಖಂಡರಾಗಬಹುದು, ಯಾರು ಬೇಕಾದರೂ ಯಾವ ಮಂತ್ರಿ ಬೇಕಾದರೂ ಆಗಬಹುದು. ಹಳ್ಳಿಯಲ್ಲಿ ಆಟಾಟೋಪ ಆಡುವ ಹುಡುಗರಿಗೆ

ಬೇಕಾದರೂ ಕರೆದುಕೊಂಡು ಬಂದು ಕೂರಿಸಬಹುದು ಎನ್ನುವಷ್ಟು ಹಗುರವಾಗುತ್ತಿದೆ. ದಯಮಾಡಿ ಇದು ಆಗಬಾರದು. ಇಲ್ಲಿ ಏನಾಗಿದೆ ಎಂದರೆ ಎಲ್ಲರೂ ತಮ್ಮನ್ನೇ ಕಂಟ್ರೋಲ್ ತೆಗೆದುಕೊಳ್ಳುವುದಕ್ಕೆ ಹೊರಟಿರುವ ಹಾಗೆ ಕಾಣುತ್ತದೆ. ಮಾತನಾಡುವುದಕ್ಕೆ ನೀವು ಸಮಯ ನಿಗದಿ ಮಾಡಿ. ನಮ್ಮೆಲ್ಲರಿಗಿಂತ ಮುಂಚೆ ತಾವು ಪಕ್ಷದ ಮುಖಂಡರು ಬುದ್ಧಿ ಹೇಳಬೇಕಾಗುತ್ತದೆ. ನಮ್ಮ ಪಕ್ಷದ ಮುಖಂಡರು ನಮ್ಮನ್ನು ಕಂಟ್ರೋಲ್ ಮಾಡಬೇಕು. ವಿರೋಧ ಪಕ್ಷದ ಮುಖಂಡರು ಅವರನ್ನೆಲ್ಲಾ ಲೀಡ್ ಮಾಡಿ ಕಂಟ್ರೋಲ್ ಮಾಡುವ ಜವಾಬ್ದಾರಿಯನ್ನು ಅವರು ತೆಗೆದುಕೊಳ್ಳಬೇಕು. ಮಾತನಾಡುವುದಕ್ಕೆ ನೀವು 15 ನಿಮಿಷ ಅಂತ ಸಮಯ ಫಿಕ್ಸ್ ಮಾಡಿದರೆ 15 ನಿಮಿಷದಲ್ಲಿ ಅವರು ಖಂಡಿತ ಮುಗಿಸುವುದಿಲ್ಲ. ಹಿಂದಿನ ಭಾಗದಲ್ಲಿರುವವರು ಅವರ ಸಣ್ಣ ಅನುಭವಗಳನ್ನು ಹೇಳುತ್ತಾರೆ, ಅದನ್ನು ಕೇಳುವ ತಾಳ್ಮೆಯೂ ಇವರಿಗೆ ಇರಬೇಕಾಗುತ್ತದೆ. ಬರೀ ಇವರು ಹೇಳುವುದನ್ನು ಕೇಳುವುದಕ್ಕೋಸ್ಕರ ನಾವು ಇದ್ದೇವಾ? ಈ ಎಳೆಯ ಮಕ್ಕಳೆಲ್ಲಾ ಕೇಳಿಕೊಂಡು ಕುಳಿತುಕೊಳ್ಳುವುದಕ್ಕೆ ಬಂದಿದ್ದಾರೆ ಎಂದು ತಿಳಿದುಕೊಂಡರೆ ನಾವು ಎಷ್ಟು ಹೊತ್ತು ಕುಳಿತುಕೊಳ್ಳುವುದು ? ಆ ಕಡೆ ಖಾಲಿ ಕುರ್ಚಿಗಳನ್ನು ನಾವು ಸದನ ನಡೆಸುವುದು, ಅಥವಾ ಸರ್ಕಾರ ನಡೆಸಿಕೊಂಡು ಹೋಗುತ್ತೇವೆ, ನಾವು ಹೇಳಿದ್ದೇ ಕೇಳಬೇಕು, ನಮಗೆ ಜನ ಬಲ ಇದೆ ಎಂದು ಹೇಳುವುದನ್ನು ನಾವು ಯಾರೂ ಕೂಡ ಒಪ್ಪುವುದಿಲ್ಲ. ರಚನಾತ್ಮಕವಾಗಿ, ಮತ್ತು ಗಂಭೀರವಾಗಿ ಸದನ ನಡೆಯಬೇಕು. ಜತೆಗೆ ಟಿವಿಯವರು ನಮ್ಮ ಸ್ನೇಹಿತರು ಎಲ್ಲರೂ ಇದ್ದಾರೆ. ಇತ್ತೀಚೆಗೆ ಟಿ.ವಿ.ಯಲ್ಲಿ ಲೈವ್ ತೋರಿಸಿ ಬಹಳ ಮರ್ಯಾದೆ ಹೋಗುತ್ತಿದೆ. ಮೊದಲೆಲ್ಲಾ ಹೇಗೋ ಏನೋ ಗುದ್ದಾಡಿದರೂ ಜನರಿಗೆ ಕಾಣುತ್ತಿರಲಿಲ್ಲ. ಈಗೆಲ್ಲಾ ನೇರವಾಗಿ ತೋರಿಸುವುದರಿಂದ ಅಲ್ಲಿ ಮನೆಯಲ್ಲಿ ಆಡುವ ಹುಡುಗರೆಲ್ಲಾ ಅದೇ ಕಣ್ಣಾ ಅವನು ಹಾಗೆ ಆಡುತ್ತಿದ್ದ, ಇವನು ಮಿಡುಕಲು ಬಂದ ಹಾಗೆ ಆಡುತ್ತಿದ್ದ, ಇವನು ಹೀಗೆ ಮಾಡುತ್ತಿದ್ದ ಎಂದು ಹಳ್ಳಿಗಳಲ್ಲಿ ಎಲ್ಲಾ ಜನ ಮಾತನಾಡುತ್ತಾರೆ. ದನ ಕಾಯುವ ಹುಡುಗರೆಲ್ಲಾ ಮಾತನಾಡುತ್ತಾರೆ. ಆದ್ದರಿಂದ ಮುಖಂಡರನ್ನೆಲ್ಲಾ ಕರೆದು ಮಾತನಾಡಿ, ಯಾರೇ ಮಾತನಾಡ ಬೇಕಾದರೂ ಅವರೇ ನಿರ್ಧಾರ ಮಾಡಲಿ, ಇಲ್ಲ ನಿಮ್ಮ ಮಾತು ಜಾರಿಗೆ ಬರಲಿ. ಇಲ್ಲ ಒಂದಿಬ್ಬರಿಗೆ ಸಸ್ಪೆಂಡ್ ಮಾಡಿಬಿಡಿ. ನಮ್ಮನ್ನೇ ಮಾಡಿ ಬಿಡಿ ಮೊದಲು. ನಾವು ನಮ್ಮ ತಪ್ಪಾಗಿದ್ದರೆ ಶಿಸ್ತಿನಿಂದ ಒಪ್ಪಿಕೊಳ್ಳುತ್ತೇವೆ. ದಯಮಾಡಿ ಸದನವನ್ನು ಸ್ವಲ್ಪ ಹೊತ್ತು ಮುಂದೂಡಿ, ಎಲ್ಲ ಪಕ್ಷಗಳ ಮುಖಂಡರನ್ನು ಕರೆಸಿ. ಯಾರಿಗೂ ವೈಯಕ್ತಿಕ ದ್ವೇಷಗಳು ಇಲ್ಲ. ಎಲ್ಲರೂ ಕೂಡ ಈ ರಾಜ್ಯದ ಹಿತಕ್ಕಾಗಿ ಬಂದಿರತಕ್ಕಂತಹವರು. ಸದನವನ್ನು ಗಂಭೀರವಾಗಿ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸದನವನ್ನು ಅರ್ಧಗಂಟೆ ಕಾಲ ಮುಂದೂಡಲಾಗಿದೆ.

(ಸದನವು 3 ಗಂಟೆ 43 ನಿಮಿಷಕ್ಕೆ ಮುಂದೂಡಲ್ಪಟ್ಟು ಅರ್ಧಗಂಟೆ ನಂತರ ಪುನಃ ಸಮಾವೇಶಗೊಳ್ಳಬೇಕೆಂದು ನಿಶ್ಚಯಿಸಿತು)